ಓಂ ಶ್ರೀ ಗುರು ಬಸವಲಿಂಗಾಯ ನಮಃ


866666

ಕಲ್ಯಾಣ ಕಿರಣ


ಜೂನ್ 2016

ಶರಣರ ನಡೆ ಮುಕ್ತಿಯ ಕಡೆ

ಜೂನ್ ೨೦ರಂದು ಪೂಜ್ಯಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮೀಜಿ ಲಿಂಗೈಕ್ಯ ಸಂಸ್ಮರಣೆ



http://kalyanakirana.over-blog.com/ ಬ್ಲಾಗ್‌ನಲ್ಲಿ



ಶರಣು ಶರಣಾರ್ಥಿ

ಪ್ರಾಣಲಿಂಗವೆಂದರಿದ ಬಳಿಕ
ಪ್ರಾಣ ಪ್ರಸಾದವಾಯಿತ್ತು.
ಲಿಂಗಪ್ರಾಣವೆಂದರಿದ ಬಳಿಕ
ಅಂಗದಾಸೆ ಹಿಂಗಿತ್ತು.
ಲಿಂಗಸೋಂಕಿನ ಸಂಗಿಗೆ ಕಂಗಳೆ
ಕರುವಾದವಯ್ಯಾ.
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ.
ಹಿಂಗದೆ ಅನಿಮಿಷನಾಗಿಹ ಶರಣಂಗೆ.

– ಅಕ್ಕ ಮಹಾದೇವಿ

ಜೂನ್

ಹಬ್ಬ, ಹುಣ್ಣಿಮೆಗಳು

ಜೂನ್-26: ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ


ಜೂನ್-30: ಪೂಜ್ಯಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮೀಜಿ ಲಿಂಗೈಕ್ಯ ಸಂಸ್ಮರಣೆ

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ,
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ,
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ,
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಒಂದು ಪ್ರತಿಗೆ: 20 ರೂಪಾಯಿ
ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ – 47 ಬಸವ ಶಕೆ 882
ಸಂಚಿಕೆ – 06 ಜೂನ್ 2016



Kalyana Kirana-R.No.19988/70. Monthly Magzine Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.

Ph: 080-23131476. SMS-9945806297.
E-mail: kalyanakirana1970@gmail.com

ಸಂಪಾದಕರ ನುಡಿ

✍ ಮಾತಾಜಿ



ಕನಸು ನನಸಾಗುವ ಕಾಲ

ನಮ್ಮೆಲ್ಲರಿಗೆ,
ಅಸಂಖ್ಯಾತ ಬಸವ ಭಕ್ತರಿಗೆ ಒಂದು ಕನಸು, ಕನವರಿಕೆ ಇತ್ತು. ಅದೆಂದರೆ ಬಸವ ತತ್ವ ಸಂದೇಶಗಳನ್ನು ಬಿತ್ತರಿಸುವ ಟಿ.ವಿ.ಚಾನೆಲ್ ಎಂದು ಬರುತ್ತದೋ? ಯಾರು ಮಾಡುತ್ತಾರೋ ಎಂದು ಅನೇಕರು ಮಳೆಗಾಗಿ ಇಳೆ ಹಂಬಲಿಸು ವಂತೆ ಹಂಬಲಿಸುತ್ತಿದ್ದರು. ಸದ್ಯದಲ್ಲಿ ಬಸವ ಸಮಿತಿಯವರ ಆಶ್ರಯದಲ್ಲಿ ದಾನಿಗಳ ನೆರವಿನಿಂದ ಚಂದನವಾಹಿನಿಯಲ್ಲಿ ವಚನಾಮೃತ ಬರುತ್ತಿರುವುದು ಸಮಾಧಾನಕರವಾದರೂ ಆಸ್ವಾದಂತೆ ಪೂರ್ಣ ಪ್ರಮಾಣದ ತತ್ವ ಪ್ರಸಾರವನ್ನು ಅನೇಕರು ಬಯಸಿದ್ದರು.

ಎಲ್ಲ ಟಿ.ವಿ.ಚಾನೆಲ್‌ಗಳಲ್ಲೂ ಜನರು ಮೂಢನಂಬಿಕೆ ಪೋಷಿಸುವ ಜ್ಯೋತಿಷ್ಯ, ವಾಸ್ತು, ಇವೇ ಬರುತ್ತಿರುವುದು ವಿಚಾರವಾದಿಗಳಿಗೆ ಬಹು ಬೇಸರ ತರಿಸಿತ್ತು. ಬಸವ ತತ್ವವು ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾಗುವ ಬೇವಿನಂತೆ, ಅದರಿಂದ ಜನರು ಮೂಢನಂಬಿಕೆ ತೊರೆದು ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಅನುವಾಗುತ್ತದೆ. ಕೋಟ್ಯಂತರ ರೂಪಾಯಿ ನಿರೀಕ್ಷಿಸುವ ಇಂಥ ಸಾಹಸ ಮಾಡುವವರು ಯಾರು ಎಂದು ಚಿಂತಿಸಿ ಮನಸ್ಸು ನಿರಾಶೆಯಿಂದ ಮಡುಗಟ್ಟುತ್ತಿತ್ತು. ಇಂಥ ಸನ್ನಿವೇಶದಲ್ಲಿ ಮನಸ್ಸನ್ನು ಮುದಗೊಳಿಸುವ ಚೇತೋಹಾರಿ ಸುದ್ದಿ ಹರಡುತ್ತ ಮೈಮನಗಳನ್ನು ಪುಳಕ ಗೊಳಿಸುತ್ತಲಿದೆ. ಅದೆಂದರೆ ಶ್ರೀ ಬಸವ ಎಂಬ ಟಿ.ವಿ.ವಾಹಿನಿ ಇಷ್ಟರಲ್ಲೇ ಆರಂಭವಾಗಲಿರುವುದು.

ಶ್ರೀ ಬಸವ ಟಿ.ವಿಯನ್ನು ಆರಂಭಿಸುತ್ತಿರುವುದು ಜಂಗಮ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆ. ಇದರ ಸೂತ್ರಧಾರರು ಶರಣ. ಈ. ಕೃಷ್ಣಪ್ಪನವರು. ಆಗಸ್ಟ್ ತಿಂಗಳಲ್ಲಿ ವಾಹಿನಿ ಆರಂಭವಾಗುವ ನಿರೀಕ್ಷೆ ಇದೆ. ವಚನ ಸಾಹಿತ್ಯದ ಬಗ್ಗೆ ನೃತ್ಯ, ಗಾಯನ, ಉಪನ್ಯಾಸ ಮಾಡುವವರಿಗೆ ವೇದಿಕೆ ಸಿಗಲಿದೆ ಎಂಬುದೇ ಸಹರ್ಷದ ವಿಷಯ. ಇದೊಂದು ದೊಡ್ಡ ಸಾಹಸ; ಶರಣ. ಈ.ಕೃಷ್ಣಪ್ಪ ಕೈ ಹಾಕಿದ್ದಾರೆ. ಬಸವ ತತ್ವಾಭಿಮಾನಿಗಳು ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಕಡಿಮೆಯೆ! ಗುರು ಬಸವಣ್ಣನವರ ಜೀವನ, ತತ್ವ – ಸಂದೇಶ ಶರಣರ ಜೀವನ ವೃತ್ತಾಂತ ಮುಂತಾದವನ್ನು ಪ್ರಾಮಾಣಿಕವಾಗಿ ಹೇಳಲು ಎಂಟೆದೆ ಬೇಕು. ಮೂಢ ವ್ಯವಸ್ಥೆಯ ವಿರುದ್ಧ ಅಂದು ಕ್ರಾಂತಿಯೋಗಿ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಹೋರಾಡಿ ಯಶಸ್ಸು ಕಂಡರು. ನಂತರ ವೈದಿಕರ ಅಬ್ಬರದಲ್ಲಿ ಆ ವಿಚಾರಗಳು ದುರ್ಬಲಗೊಂಡು ವನವಾಸ ಮತ್ತು ಅಜ್ಞಾತವಾದ ಅನುಭವಿಸಿದೆ. ೮೫೦ ವರ್ಷ ಸುಪ್ತವಾಗಿದ್ದ ಅವು ಇದೀಗ ಕಗ್ಗತ್ತಲೆಯಿಂದ ಹೊರಬರುತ್ತಿವೆ. ಇದರಲ್ಲಿ ಶ್ರೀ ಬಸವ ವಾಹಿನಿ ಪಾತ್ರ ಹಿರಿದಾಗಿದೆ. ಇಂಥ ಸಾಹಸ ಮಾಡುತ್ತ ಇರುವ ಶರಣ. ಕೃಷ್ಣಪ್ಪನವರನ್ನು ಅಭಿನಂದಿಸೋಣ. ಶ್ರೀ ಬಸವ ವಾಹಿನಿ ಜನಪ್ರಿಯವಾಗಲಿ ಎಂದು ಹಾರೈಸೋಣ.

ಅಕ್ಕನ ಅಮರವಾಣಿ ಭಾಗ–30



331. ದ್ವೈ[illegible]ನ ಧ್ಯಾನ

ಜೀವೇಶ್ವರಂಗಾಶ್ರಯವಾದ ಸೂಕ್ಷ್ಮದೇಹಮಧ್ಯದಲ್ಲಿ ಷಟ್‌ಚಕ್ರಂಗಳಲ್ಲಿ ಹುಟ್ಟಿರ್ದ ಷಟ್ಕಮಲಂಗಳನು ಆಧಾರ ತೊಡಗಿ ಆಜ್ಞಾಚಕ್ರವೇ ಕಡೆಯಾಗುಳ್ಳ ಬ್ರಹ್ಮಾದಿಗಳ ಸ್ಥಾನಂಗಳ ಗುರೂಪದೇಶದಿಂದ ಭಾವಿಸುವುದು. ಆಜ್ಞಾಚಕ್ರದತ್ತಣಿಂದ ಊರ್ಧ್ವ ಭಾಗವಾದ ಬ್ರಹ್ಮರಂಧ್ರದಲ್ಲಿ ಮಾಯಿತ್ತಾದಡೆ ಸಹಸ್ರದಳ ಕಮಲವನು ಭಾವಿಸುವುದು.
ಆ ಸಹಸ್ರದಳ ಕಮಲದಲ್ಲಿ ನಿರ್ಮಲವಾದ ಚಂದ್ರಮಂಡಲವನು ಧ್ಯಾನಿಸುವುದು.
ಆ ಚಂದ್ರಮಂಡಲದ ಮಧ್ಯದಲ್ಲಿ ವಾಲಾಗ್ರ ಮಾತ್ರದೋಪಾದಿಯಲ್ಲಿ ಪರಮ ಪರಮ ಸೂಕ್ಷ್ಮರಂಧ್ರವನು ಉಪದೇಶದಿಂದರಿವುದು.
ಆ ಸೂಕ್ಷ್ಮರಂಧ್ರವನೇ ಕೈಲಾಸಸ್ಥಾನವಾಗಿ ಅರಿದು ಆ ಕೈಲಾಸದಲ್ಲಿ ಇರುತಿರ್ದ

**ಪರಮೇಶ್ವರನನು ಸಮಸ್ತಕಾರಣಗಳಿಗೆ
ಕಾರಣವಾಗಿದ್ದಾತನಾಗಿ
ಧ್ಯಾನಿಸುವುದಯ್ಯಾ ಶ್ರೀ
ಚೆನ್ನಮಲ್ಲಿಕಾರ್ಜುನದೇವರ ದೇವಾ.**

ಸ್ಥೂಲ, ಸೂಕ್ಷ್ಮ, ಕಾರಣ ಎಂಬವು ಮೂರು ಶರೀರಗಳು. ಸೂಕ್ಷ್ಮ ಶರೀರದಲ್ಲಿಯೇ ಜೀವವು ನೆಲೆಸಿರುವುದು. ಇದು ನಿರಾಕಾರನು ಬ್ರಹ್ಮಾಂಡವ್ಯಾಪಿಯೂ ಆದ ಈಶ್ವರ(creater) ನ ವಾಸಸ್ಥಾನ. ಸೂಕ್ಷ್ಮ ಶರೀರದಲ್ಲಿ ಕಶೇರುಕರಜ್ಜದ ಮೇಲೆ ಷಟ್‌ಚಕ್ರಗಳು ನೆಲೆಸಿವೆ ಮತ್ತು ಈ ಚಕ್ರಗಳಲ್ಲಿ ಕಮಲದ ಆಕಾರದಲ್ಲಿ ದಳಗಳಿವೆ. ಆಧಾರವೇ ಮೊದಲ ಚಕ್ರ ಆಜ್ಞಾ ಚಕ್ರವೇ ಕಡೆಯ ಚಕ್ರ, ಮಧ್ಯೆ ಬರುವುವು. ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ. ಈ ಚಕ್ರಗಳು ದೈವೀಶಕ್ತಿಯ ಸ್ಥಾನಗಳು. ಆಜ್ಞಾಚಕ್ರದ ನಂತರ ಬರುವವು ಬ್ರಹ್ಮರಂಧ್ರ ಸಹಸ್ರಾರ, ಶಿಖಾ ಮತ್ತು ಪಶ್ಚಿಮ ಚಕ್ರ, ಬ್ರಹ್ಮರಂಧ್ರ ದಾಟಿದ ನಂತರ ಸಹಸ್ರ ದಳದ ಕಮಲದ ಮೇಲೆ ಧ್ಯಾನವನ್ನು ಕೇಂದ್ರೀಕರಿಸಬೇಕು. ಅದು ಚಂದ್ರಮಂಡಲದಂತೆ ಪ್ರಶಾಂತವಾಗಿರುವುದು. ಅಲ್ಲಿಂಗ ಮೇಲೆ ಸೂಕ್ಷರಂಧ್ರವಿರುತ್ತದೆ. ಆ ಸೂಕ್ಷ್ಮರಂಧ್ರವನ್ನೇ ಕೈಲಾಸ ಎಂದು ಕರೆಯಲಾಗುವುದು. ಇಲ್ಲಿ ನೆಲೆಸಿರುವುದು ಪರಮ ತತ್ವ ಸಮಸ್ತಕ್ಕೂ ಕಾರಣೀಭೂತವಾಗಿರುವ ಈ ತತ್ವವನ್ನು ಕುರಿತು ಧ್ಯಾನಿಸುವುದೇ ನಿಜವಾದ ಸಾಧನೆ.

ನಾನು ಬಳಸಿಕೊಳ್ಳುತ್ತಿರುವ ಶರಣ.ಸಚ್ಚಿದಾನಂದ ಚಟ್ನಳ್ಳಿ ಅವರು ಸಂಪಾದಿಸಿದ **"ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ"** ಗ್ರಂಥದಲ್ಲಿ ಪುಟ 111 ರಿಂದ 119ರವರೆಗೆ ಯೋಗಾಂಗ ತ್ರಿವಿಧಿ ಬಂದಿದೆ. ಈಗಾಗಲೇ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಕಲ್ಯಾಣ ಕಿರಣದಲ್ಲಿ ಯೋಗಾಂಗ ತ್ರಿವಿಧಿಗೆ ವ್ಯಾಖ್ಯಾನವನ್ನು ಬರೆದಿದ್ದು ಅದು ಪ್ರತ್ಯೇಕ ಪುಸ್ತಕವಾಗಿಯೂ ಪ್ರಕಟವಾಗಿದೆ. ಆದ್ದರಿಂದ ವ್ಯಾಖ್ಯಾನವನ್ನು ಪುನರಾವರ್ತನೆ ಮಾಡುವುದಿಲ್ಲ.

333. ಶರಣನ ಅಪ್ರತಿಮ ನಿಲುವು

**ಶಿವನು ತಾನೆ ಗುರುವಾಗಿ
ಬಂದುಮಹಾಘನಲಿಂಗವ ವೇಧಿಸಿಕೊಟ್ಟ
ಪರಿಯಂತೆಂದೊಡೆ; ಆತ್ಮಗೂಡಿ
ಪಂಚಭೂತಂಗಳನೆ ಷಡಂಗವೆಂದೆನಿಸಿ,
ಆ ಅಂಗಕ್ಕೆ ಕಲೆಗಳನೆ ಷಡುಶಕ್ತಿಗಳೆನಿಸಿ,
ಆ ಶಕ್ತಿಗಳಿಗೆ ಷಡ್ವಿಧ ಭಕ್ತಿಯನಳವಡಿಸಿ,
ಆ ಭಕ್ತಿಗಳಿಗೆ ಭಾವ-ಜ್ಞಾನ-ಮನ-ಬುದ್ಧಿ-ಚಿತ್ತ
ಅಹಂಕಾರಗಳನೆ ಹಸ್ತಂಗಳೆಂದೆನಿಸಿ
ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ
ಪಂಚಲಿಂಗಂಗಳನೆ ಷಡ್ವಿಧ ಲಿಂಗಂಗಳೆಂದೆನಿಸಿ
ಆ ಮಂತ್ರ ಲಿಂಗಂಗಳಿಗೆ ಹೃದಯಗೂಡಿ
ಪಂಚೇಂದ್ರಿಯಂಗಳನೆ ಮುಖಂಗಳೆಂದೆನಿಸಿ
ಆ ಮುಖಂಗಳಿಗೆ ತನ್ಮಾತ್ರಂಗಳನೆ
ಪದಾರ್ಥಗಳೆಂದೆನಿಸಿ
ಆ ದ್ರವ್ಯ ಪದಾರ್ಥಂಗಳು ಆಯಾ
ಮುಖದ ಲಿಂಗಗಳಲ್ಲಿ ನಿರಂತರ
ಸಾವಧಾನದಿಂದ ಅರ್ಪಿತವಾಗಿ
ಬೀಗಲೊಡನೆ ಅಂಗಸ್ಥಲಂಗಳಡಗಿ,ತ್ರಿವಿಧ
ಲಿಂಗಾಂಗಸ್ಥಲಂಗಳುಳಿದು
ಕಾಯಗುರು, ಪ್ರಾಣಲಿಂಗ, ಜ್ಞಾನಜಂಗಮ,
ಗುರುವಿನಲ್ಲಿ ಶುದ್ಧಪ್ರಸಾದ
ಲಿಂಗದಲ್ಲಿ ಸಿದ್ಧ ಪ್ರಸಾದ
ಜಂಗಮಲ್ಲಿ ಪ್ರಸಿದ್ಧ ಪ್ರಸಾದ
ಇಂತೀ ತ್ರಿವಿಧ ಪ್ರಸಾದ ಏಕಾರ್ಥವಾಗಿ
ಮಹಾಘನ ಪರಿಪೂರ್ಣ ಪ್ರಸಾದವಳವಟ್ಟ
ಶರಣ ಜ್ಞಾನಿಯಲ್ಲ, ಅಜ್ಞಾನಿ ಮುನ್ನವೆ ಅಲ್ಲ,
ಶೂನ್ಯನಲ್ಲ, ನಿಃಶೂನ್ಯನಲ್ಲ, ದ್ವೈತಿಯಲ್ಲ,
ಅದ್ವೈತಿಯಲ್ಲ ಇಂತೀ ಉಭಯಾತ್ಮಕ
ತಾನೆಯಾಗಿ ಇದು ಕಾರಣ, ಇದರಾಗುಹೋಗು
ಸಕಲ ಸಂಬಂಧವ ಚೆನ್ನಮಲ್ಲಿಕಾರ್ಜುನದೇವಾ,
ನಿಮ್ಮ ಶರಣರೆ ಬಲ್ಲರು.**

ಪರಮಾತ್ಮನು ತನ್ನ ಲೀಲಾ ವಿನೋದಕ್ಕಾಗಿ ಜಗತ್ತನ್ನು ಸೃಷ್ಟಿಸುವನು. ತನ್ನ ಅಂಶವಾದ ಜೀವಾತ್ಮರುಗಳನ್ನು ಆಡಲು ಬಿಡುವನು. ಭವದಲ್ಲಿ ಬೆಂದು ಬಳಲುತ್ತಿರುವ ಜೀವಾತ್ಮರ ಸಂಕಷ್ಟ ಪರಿಹರಿಸಲು ಗುರು ರೂಪದಲ್ಲಿ ಬಂದು ಉಪದೇಶಿಸುವನು. ಲಿಂಗರೂಪದಲ್ಲಿ ದೇವರನ್ನು ಚುಳುಕಾಗಿಸಿ ಕೊಡುವನು. ಷಡಂಗ ರೂಪವಾದ ದೇಹವು ಪಂಚಭೂತಗಳಿಂದ ಮತ್ತು ಆತ್ಮದಿಂದ ಸಂಯುಕ್ತವಾಗಿರುವುದು. ಇದು ಷಟ್‌ಶಕ್ತಿಗಳ ಆಗರವಾಗಿರುವವು ಜ್ಞಾನ, ಇಚ್ಛಾ, ಕ್ರಿಯಾ, ಆದಿ, ಚಿಚ್ಛಕ್ತಿ, ಪರಾಶಕ್ತಿ ಎಂಬ ಷಡುಶಕ್ತಿಗಳು ಪರಮಾತ್ಮನ ಕಡೆಯಿಂದ ಅವತೀರ್ಣವಾಗುವುವು. ಶ್ರದ್ಧಾ, ನಿಷ್ಠ, ಅವಧಾನ, ಅನುಭಾವ, ಆನಂದ, ಸಮರಸ ಎಂಬ ಷಡ್ವಿಧ ಭಕ್ತಿಗಳನ್ನು ಭಕ್ತನು ಅಳವಡಿಸಿಕೊಳ್ಳುವನು. ಈ ಭಕ್ತಿ ಎಂಬ ಉಣಿಸನ್ನು ನೀಡಲಿಕ್ಕೆ ಭಾವ-ಜ್ಞಾನ-ಮನ, ಬುದ್ಧಿ-ಚಿತ್ತ-ಅಹಂ ಎಂಬುವನ್ನೇ ಹಸ್ತವಾಗಿ ಮಾಡುವನು. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂಬ ಷಡ್ವಿಧ ಲಿಂಗಗಳಿಗೆ ನೀಡುವನು. ಓಂ ನಮಃ ಶಿವಾಯ (ಓಂ ಲಿಂಗಾಯ ನಮಃ) ಎಂಬ ಮಂತ್ರಾಕ್ಷರಗಳನ್ನು ಸಾಧನವಾಗಿ ಮಾಡಿಕೊಳ್ಳುವನು. ಪಂಚೇಂದ್ರಿಯಗಳನ್ನು ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ ಎಂಬುವನ್ನು ದೈವೀಕರಿಸುವನು. ಇವುಗಳ ಆಹಾರವಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವನ್ನೂ ದೈವೀಕರಿಸುವನು. ಹೀಗೆ ಪಂಚೇಂದ್ರಿಯ, ತನ್ಮಾತ್ರೆ ಮುಂತಾದವೆಲ್ಲ ದೈವೀಕರಣಗೊಂಡಾಗ ಅಂಗಗುಣಗಳು ಅಳಿಯುತ್ತವೆ; ಗುರು-ಲಿಂಗ-ಜಂಗಮ ಎಂಬ ಲಿಂಗಸ್ಥಲಗಳು ಮಾತ್ರ ಉಳಿಯುತ್ತವೆ. ಆಗ ಶರೀರವೇ ಗುರುವಾಗುತ್ತದೆ, ಪ್ರಾಣವೇ ಲಿಂಗವಾಗುತ್ತದೆ, ಜ್ಞಾನವೇ ಜಂಗಮವಾಗುತ್ತದೆ. ಗುರುವಿನಿಂದ ಪಡೆದುಕೊಳ್ಳುವುದು ಶುದ್ಧ ಪ್ರಸಾದ, ಲಿಂಗದಿಂದ ಪಡೆದುಕೊಳ್ಳುವುದು ಸಿದ್ಧಪ್ರಸಾದ, ಜಂಗಮದಿಂದ ಪಡೆದುಕೊಳ್ಳುವುದು ಪ್ರಸಿದ್ಧ ಪ್ರಸಾದ ಎನಿಸಿ ಶರಣನು ಪ್ರಸಾದ ಜೀವಿಯಾಗುವನು, ಜ್ಞಾನ-ಅಜ್ಞಾನಗಳ ಪರಿವೆ ಇಲ್ಲದ ಶರಣನು ಶೂನ್ಯವಾದಿಯಲ್ಲ; ದ್ವೈತಿ ಮತ್ತು ಅದ್ವೈತಿಯಲ್ಲ; ಇಂಥಾ ದಿವ್ಯ ಮತ್ತು ಅತೀತವಾದ ಸ್ಥಿತಿಯನ್ನು ಶರಣರು ಮಾತ್ರ ಬಲ್ಲರು ಮತ್ತು ಸಾಧಿಸುವರು.

334. ಜ್ಞಾನ-ಭಕ್ತಿಗಳ ಸಂಬಂಧ

**ಜ್ಞಾನದ ಕಾರಣಾಂಗವೆ ಭಕ್ತಿಯು.
ಭಕ್ತಿಯ ಮಹಾಕಾರಣಾಂಗವೆ ಜ್ಞಾನವು.
ಭಕ್ತಿ ಜ್ಞಾನವೆಂಬುದು ಕಾಕಾಕ್ಷಿಯಂತೆ.
ಭಕ್ತಿ ಜ್ಞಾನವೆಂಬುದು ಎನ್ನ ಮೋಹದ
ಚೆನ್ನಮಲ್ಲಿಕಾರ್ಜುನದೇವರ ದೇವಾ ನಿಮ್ಮಂತೆ.**

ಭಕ್ತಿ ಮತ್ತು ಜ್ಞಾನಗಳು ಅವಿನಾಭಾವ ಸಂಬಂಧದಿಂದ ಕೂಡಿವೆ. ಕಾಗೆಗೆ ಒಂದೇ ಕಣ್ಣುಗುಡ್ಡೆ ಇರುವುದೆಂದು ಅದೇ ಎರಡೂ ಕಣ್ಣುಗಳಲ್ಲಿ ಸಂಚರಿಸುತ್ತದೆ ಎಂದು ಹೇಳಲಾಗುವುದು. ಜ್ಞಾನದ ಮೂಲಕಾರಣವೇ ಭಕ್ತಿ; ಭಕ್ತಿಯ ಮೂಲಕ ಕಾರಣವೇ ಜ್ಞಾನ. ಸಾಧನೆಗೆ ಇವೆರಡೂ ಅತ್ಯಗತ್ಯ ಮತ್ತು ದೇವರಿಗೆ ಇವೆರಡೂ ಬಲುಪ್ರಿಯವಾದವು.

335. ಜಂಗಮವೇ ಶ್ರೇಷ್ಠ

**ಪೃಥ್ವಿಯ ಗೆಲಿದ ಏಲೇಶ್ವರನ ಕಂಡೆ.
ಭಾವಭ್ರಮೆಯ ಗೆಲಿದ ಬ್ರಹ್ಮೇಶ್ವರನ ಕಂಡೆ.
ಸತ್ವರಜತಮ ತ್ರಿವಿಧವ ಗೆಲಿದ ತ್ರಿಪುರಾಂತಕನ
ಕಂಡೆ. ಅಂತರಂಗದ ಆತ್ಮಜ್ಞಾನದಿಂದ ಜ್ಯೋತಿ
ಸಿದ್ಧಯ್ಯನ ಕಂಡೆ. ಇವರೆಲ್ಲರ ಮಧ್ಯಮಸ್ಥಾನ
ಪ್ರಾಣಲಿಂಗಜಂಗಮವೆಂದು
ಸುಜ್ಞಾನದಲ್ಲಿ ತೋರಿದ ಬಸವಣ್ಣಾ;
ಆ ಬಸವಣ್ಣನ ಪ್ರಸಾದದಿಂದ
ಚೆನ್ನಮಲ್ಲಿಕಾರ್ಜುನದೇವರ ದೇವನ
ಕಂಡೆನಯ್ಯಾ.**

ಭೂಮಂಡಲವನ್ನೇ ಗೆಲಿದ ಶಿವನ ಒಂದು ಅವತಾರವಾದ ಏಲೇಶ್ವರನ ದರ್ಶನಪಡೆದೆನು. ಭಾವ ಭ್ರಮೆಯನ್ನು ಗೆಲಿದ ಶಿವನ ಮತ್ತೊಂದು ರೂಪವಾದ ಬ್ರಹ್ಮೇಶ್ವರನ ದರ್ಶನ ಪಡೆದೆನು. ಸತ್ವ-ರಜ-ತಮ ಎಂಬ ತ್ರಿಗುಣಗಳನ್ನು ಗೆಲಿದ ಶಿವನ ಮಗದೊಂದು ರೂಪವಾದ ತ್ರಿಪುರಾಂತಕನ ದರ್ಶನ ಪಡೆದೆ. ಈ ಸಗುಣ ಸಾಕ್ಷಾತ್ಕಾರ ಮಾತ್ರವಲ್ಲದೆ ನಿರ್ಗುಣ ಸಾಕ್ಷಾತ್ಕಾರದ ಒಂದು ಹಂತವಾದ ಜ್ಯೋತಿಯನ್ನು ಅಂತರಂಗದ ಆತ್ಮಜ್ಞಾನದಿಂದ ಕಂಡೆನು. ಇವೆಲ್ಲಕ್ಕಿಂತ ಮಿಗಿಲಾಗಿ ಪ್ರಾಣಲಿಂಗ ಸಾಧನೆಯನ್ನು ಮಾಡಿದೆ. ಎಲ್ಲಕ್ಕೂ ಶ್ರೇಷ್ಠವಾದುದು ಜಂಗಮ (ಸಮಾಜದ ಹಿತ) ಎಂಬುದನ್ನು ಗುರು ಬಸವಣ್ಣನವರು ತಿಳಿಸಿಕೊಟ್ಟರು. ಅವರ ಜ್ಞಾನ ಪ್ರಸಾದದಿಂದ ನಾನು ಪರಮಾತ್ಮನನ್ನು ಕಂಡೆ.

337. ಎಲ್ಲೆಡೆ ಸಲ್ಲುವ ಶರಣ

ಒಬ್ಬಂಗೆ ಇಹವುಂಟು ಒಬ್ಬಂಗೆ ಪರವುಂಟು,
ಒಬ್ಬಂಗೆ ಇಹವಿಲ್ಲ ಒಬ್ಬಂಗೆ ಪರವಿಲ್ಲ.
ಒಬ್ಬಂಗೆ ಇಹಪರವೆರಡೂ ಇಲ್ಲ.
ಚೆನ್ನಮಲ್ಲಿಕಾರ್ಜುನದೇವರ ದೇವನ ಶರಣರಿಗೆ
ಇಹಪರವೆರಡೂ ಉಂಟು.

ಕೆಲವರು ಭೋಗವಾದಿಗಳು. ಅವರು ಐಹಿಕ ಸುಖಗಳಲ್ಲಿಯೇ ನಿರತರು. ಅವರಿಗೆ ಇಹಲೋಕವೇ ಸತ್ಯ, ಮತ್ತೆ ಕೆಲವರು ಐಹಿಕ ಜೀವನವನ್ನು ನಿರ್ಲಕ್ಷಿಸಿ ಸತ್ತ ನಂತರ ಸಿಗುವುದೆಂಬ ಭ್ರಮೆಯಲ್ಲಿ ಪಾರಲೌಕಿಕ ಜೀವನಕ್ಕೆ ಹಂಬಲಿಸುವರು. ಮತ್ತೆ ಕೆಲವರು ಇಹಲೋಕ ಮಿಥ್ಯೆವೆಂದರೆ ನಾಸ್ತಿಕರು ಪರಲೋಕ ಮಿಥ್ಯೆ ಎನ್ನುವರು. ಇನ್ನು ಕೆಲವರು ನಿರಾಶಾವಾದಿಗಳು ಅವರಿಗೆ ಇಹಲೋಕದ ಜೀವನದಲ್ಲಿ ಆಸಕ್ತಿ ಇಲ್ಲ, ಪರಲೋಕದ ಪ್ರಾಪ್ತಿಯಲ್ಲಿ ನಂಬಿಕೆಯಿಲ್ಲ. ಹೀಗೆ ಬಗೆಗೆಯ ಜನರು ಇರುವರು. ಆದರೆ ಲಿಂಗದೇವನ ಶರಣರ ಪರಿ ಬೇರೆ. ಅವರು ಇಹಲೋಕದಲ್ಲಿ ಅರ್ಥಪೂರ್ಣವಾದ ಸಾರ್ಥಕ ಜೀವನ ನಡೆಸುವರು. ಪರಮಾತ್ಮ ನಲ್ಲಿ ಸಲ್ಲುವಂತೆ ಮರಣಾನಂತರ ಅಮರರಾಗುವರು.

338. ಅನಿಮಿಷನಾಗಿಹ ಶರಣ

ಪ್ರಾಣಲಿಂಗವೆಂದರಿದ ಬಳಿಕ
ಪ್ರಾಣ ಪ್ರಸಾದವಾಯಿತ್ತು.
ಲಿಂಗಪ್ರಾಣವೆಂದರಿದ ಬಳಿಕ
ಅಂಗದಾಸೆ ಹಿಂಗಿತ್ತು.
ಲಿಂಗಸೋಂಕಿನ ಸಂಗಿಗೆ ಕಂಗಳೆ
ಕರುವಾದವಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ಹಿಂಗದೆ ಅನಿಮಿಷನಾಗಿಹ ಶರಣಂಗೆ.

ಪ್ರಾಣಲಿಂಗಿ ಸ್ಥಲದಲ್ಲಿ ಪ್ರಾಣಲಿಂಗ (ಆತ್ಮ) ಸಾಕ್ಷಾತ್ಕಾರವಾದ ಬಳಿಕ ಪ್ರಾಣವು ದಿವ್ಯವಾಗುವುದು.. ಲಿಂಗದೇವನೇ ನನ್ನ ಪ್ರಾಣ ಎಂದು ಭಾವಿಸಿದ ಬಳಿಕ ಶರೀರದ ಗುಣಗಳು, ಆಸೆ ಕಳೆದುಹೋಗುವುದು. ಇಷ್ಟಲಿಂಗ ಸಾಧನೆಯಲ್ಲಿ ನಿರತನಾದ ಶರಣನಿಗೆ ಕಣ್ಣುಗಳೇ ಮುಖ್ಯ ಸಾಧನ. ಲಿಂಗಾಂಗಯೋಗಿ ಅನಿಮಿಷ ದೃಷ್ಟಿಯಿಂದ ಅಂದರೆ ಅರೆತೆರೆದ ಕಣ್ಣಿನಿಂದ ಕರಕಮಲದಲ್ಲಿ ಇಷ್ಟಲಿಂಗವನ್ನು ಇಟ್ಟುಕೊಂಡು ದೃಷ್ಟಿಸುವನು.


339. ಷಟ್‌ಸ್ಥಲದಲ್ಲಿ ನಿಃಸ್ಥಲ

ಭಕ್ತೆಯಾನಪ್ಪೆನಯ್ಯಾ;
ಕರ್ತೃಭೃತ್ಯವ ನಾನರಿಯೆ.
ಮಾಹೇಶ್ವರಿಯಾನಪ್ಪೆನಯ್ಯಾ;
ವ್ರತ ನೇಮ ಛಲವ ನಾನರಿಯೆ.
ಪ್ರಸಾದಿಯಾನಪ್ಪೆನಯ್ಯಾ;
ಅರ್ಪಿತ ಅನರ್ಪಿತವೆಂಬ ಭೇದವ ನಾನರಿಯೆ.
ಪ್ರಾಣಲಿಂಗಿಯಾನಪ್ಪೆನಯ್ಯಾ;
ಅನುಭಾವದ ಗಮನವ ನಾನರಿಯೆ.
ಶರಣೆಯಾನಪ್ಪೆನಯ್ಯಾ;
ಶರಣಸತಿ ಲಿಂಗಪತಿ ಎಂಬ ಭಾವವ
ನಾನರಿಯೆ. ಐಕ್ಯಳಾಗಿಪ್ಪೆನಯ್ಯಾ;
ಬೆರಸಿ ಭೇದವ ನಾನರಿಯೆ.
ಚೆನ್ನಮಲ್ಲಿಕಾರ್ಜುನದೇವರ ದೇವಾ.
ಷಟ್‌ಸ್ಥಲದಲ್ಲಿ ನಿಃಸ್ಥಲವಾಗಿಪ್ಪೆನು.

ದೇವಾ ನನ್ನ ಸಾಧನೆಯ ನಿಲುವನ್ನು ನಾನು ಏನು ಹೇಳಲಿ. ನಾನು ಭಕ್ತಸ್ಥಲದಲಿ ಇದ್ದೇನೆ ಎಂದು ಹೇಳಲೆ? ಕರ್ತನಾದ ಪರಮಾತ್ಮನಿಗೆ ಭಕ್ತಳಾಗಿ ದಾಸಭಕ್ತಿಯನ್ನು ಮಾಡಬೇಕು ಎಂಬುದನ್ನು ಅರಿಯೆನು. ಮಾಹೇಶ್ವರ ಸ್ಥಲದಲ್ಲಿ ಇರುವೆ ಎಂದು ಹೇಳಲಿ. ಆ ಸ್ಥಲದ ಲಕ್ಷಣಗಳಾದ ವ್ರತನಿಷ್ಠೆ, ನೇಮವನ್ನರಿತಿಲ್ಲ. ಮಾಹೇಶ್ವರ ಸ್ಥಲದ ಮುಖ್ಯ ಲಕ್ಷಣ ಛಲ, ಅದು ನನ್ನಲ್ಲಿಲ್ಲ. ಪ್ರಸಾದಿ ಸ್ಥಲದಲ್ಲಿ ಇದ್ದೇನೆ ಎಂದು ಹೇಳಲೇ? ಹೇಗೆ ಅರ್ಪಿಸಬೇಕು? ಯಾವುದು ಅನರ್ಪಿತ ಎಂಬ ಪರಿಜ್ಞಾನ ನನಗಿಲ್ಲ. ಪ್ರಾಣಲಿಂಗಿ ಸ್ಥಲದಲ್ಲಿ ಇದ್ದೇನೆ ಎಂದು ಹೇಳಲೇ? ಈ ಸ್ಥಲದ ಪ್ರಮುಖ ಲಕ್ಷಣವಾದ ಅನುಭಾವ ಭಕ್ತಿ ನನ್ನಲ್ಲಿಲ್ಲ. ಶರಣ ಸ್ಥಲದಲ್ಲಿ ಇದ್ದೇನೆ ಎಂದು ಹೇಳಲೆ? ಲಿಂಗದೇವನೆಂಬ ಪತಿಯಲ್ಲಿ ಶರಣ ಸತಿಯಾಗಿ ಹೇಗೆ ಭಾವಿಸಬೇಕು ಎಂಬುದನ್ನು ನಾನರಿಯೆ. ಐಕ್ಯಸ್ಥಲದಲ್ಲಿ ಇದ್ದೇನೆ ಎಂದು ಹೇಳಲೆ? ಲಿಂಗದೇವನೊಡನೆ ಭಾವೈಕ್ಯ ಸ್ಥಿತಿಯನ್ನು ಹೊಂದುತ್ತೇನೆ. ಆದರೆ ಬಹುರ್ಮುಖಿವಾಗಲು ಬರುವುದಿಲ್ಲ. ಹೀಗಾಗಿ ಷಟಸ್ಥಲದಲ್ಲಿ ಯಾವ ಸ್ಥಲದಲ್ಲೂ ಇಲ್ಲ ಎಂದು ಹೇಳಲೆ? ಅಥವಾ ಷಟಸ್ಥಲವನ್ನು ದಾಟಿ ಅತೀತಳಾಗಿದ್ದೇನೆಂದು ಭಾವಿಸಲೆ?

ಮುಂದುವರಿಯುವುದು...

ಶ್ರೀಗುರು ನಿಮ್ಮಯ ವಚನೋಪದೇಶ !!!



ಶ್ರೀ ಗುರುವಚನೋಪದೇಶವನಾಲಿಸಿ ।
ದಾಗಳಹುದು ನರರಿಗೆ ಮುಕುತಿ ॥ ಪ ॥

ದುರಿತಕರ್ಮವನೊಲ್ಲದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡು ।
ಕರುಣವಿರಲಿ ಜೀವರೊಳು ನೀತಿವಿಧನಾಗು
ಪೊರೆಪೊರ್ದಿದರನೆಂದು ಬೆಸಸುವ ॥ 1 ॥



ನಿಂದಿಸಿ ನುಡಿಯದಿರನಾರನು ಮನಸಿಗೆ
ಬಂದಂತೆ ನಡೆಯದಿರಿಹದಲ್ಲಿ ।
ಕುಂದುವಡೆಯದಿರು ಕಾಮಾದಿಗಳನು ಜಯಿ
ಸೆಂದು ಕೈವಿಡಿದನುಗ್ರಹಿಸುವ ॥ 2 ॥

ಭವಮಾಲೆಗಲಸು ಪುಸಿಯದಿರೆಡರು ಬಂದು
ಕವಿಯಲಂಜದಿರು ಸಂಪದದೊಳು ।
ತವೆ ಮದವಳಿದಿರು ತತ್ತ್ವ ಸಂತತಿಯನು
ವಿವರಿಸಿ ನೋಡೆಂದು ತಿಳುಪುವ ॥ 3 ॥



ಬಳಸದಿರದ್ವೈತವನು ಬಾಹ್ಯದಲ್ಲಿ
ನಿನ್ನೊಳಗೇಕೋಭಾವನೆಯೊಡಗೂಡು ।
ತಿಳಿದು ಸಮಯನಿಷ್ಠೆಗಲಿ ವೇದವಿಧಭಕ್ತಿ
ಗಳನಗಲದಿರೆಂದುಸುರುವ ॥ 4 ॥

ಆರು ನಾನೆಂದು ವಿಚಾರಿಸು ವಿಷಯಸಂ
ಸಾರವಿದನು ಕನಸೆಂದರಿ ।
ಮಾರಮರ್ದನ ಶಂಭುಲಿಂಗವನೊಲಿಸಿ
ಗಂಭೀರ ಸುಖದೊಳಿರೆಂದರುಪುವ ॥ 5 ॥

ಶ್ರೀ ಗುರುವಚನೋಪದೇಶವನಾಲಿಸಿ ।
ದಾಗಳಹುದು ನರರಿಗೆ ಮುಕುತಿ ॥ ಪ ॥

* ಲೇಖಕರು: - ಶ್ರೀ ನಿಜಗುಣ ಶಿವಯೋಗಿಗಳು



ಚಿಂತನ ಮಂಥನ

ಬಾಳ ಬೆಳಕು

| ಅಂತರ್‌ಜ್ಯೋತಿ

ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯ
ತನಗಾದ ಆಗೇನು, ಅವರಿಗಾದ ಚೇಗೇನು
ತನುವಿನ ಕೋಪ ತನ್ನ ಹಿರಿತನದ ಕೇಡು
ಮನದ ಕೋಪ ತನ್ನ ಅರುಹಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಲಿಂಗದೇವ

ಈ ಮೇಲಿನ ವಚನವು ಎಷ್ಟು ಅಧ್ಬುತವಾದದ್ದು, ಸಾಮಾನ್ಯ ಅರ್ಥದಲ್ಲಿ ನೋಡಿದರೆ ಈ ವಚನವನ್ನು ಪರಿಪಾಲನೆ ಮಾಡುವುದು ಅಷ್ಟು ಕಷ್ಟವಲ್ಲವೆನಿಸಬಹುದು, ಆದರೆ ಇದರ ಅನುಷ್ಠಾನವು ಅಷ್ಟು ಸುಲಭವಲ್ಲ, ಏಕೆ? ಎಂದೆನಿಸಬಹುದು.

ಒಂದು ದಿನ ಒಬ್ಬ ಸಾತ್ವಿಕ ಸ್ವಭಾವದ ವ್ಯಕ್ತಿ ನದಿಯ ನೀರಿನಲ್ಲಿ ಸ್ನಾನ ಮಾಡುವಾಗ ಆತನ ಸಮೀಪದಲ್ಲೇ ಒಂದು ಚೇಳು ನೀರಿನಲ್ಲಿ ಬಿದ್ದು ಒದ್ದಾಡುತ್ತಿತ್ತು, ಅದನ್ನು ಕಂಡ ಆ ಸಾಧು ಆ ಚೇಳಿನ ಪ್ರಾಣ ಉಳಿಸಲು ತನ್ನ ಕೈಯನ್ನು ನೀರಿನಲ್ಲಿ ಮುಳುಗಿಸಿ ಆ ಚೇಳನ್ನು ಎತ್ತಿ ಬಂಡೆಯ ಮೇಲೆ ಇಡುತ್ತಿದ್ದಂತೆಯೇ ಆ ಚೇಳು ಆ ಸಾಧುವಿನ ಕೈಗೆ ಕುಟುಕಿತು, ಆದರೆ ಆ ಸಾಧು ಅದನ್ನು ಬಂಡೆಯ ಮೇಲೆ ಇರಿಸಿದ, ಪುನಃ ಆ ಚೇಳು ಬಂಡೆಯ ಮೇಲಿಂದ ಜಾರಿ ಕೆಳಕ್ಕೆ ನೀರಿಗೆ ಬಿತ್ತು, ಪುನಃ ಸಾಧು ಅದನ್ನು ಎತ್ತಿ ಬಂಡೆ ಮೇಲೆ ಇರಿಸುವಷ್ಟರಲ್ಲಿ ಅದು ಪುನಃ ಆತನ ಕೈಯನ್ನು ಕುಟುಕಿತು, ಸಹ ಸಾಧು ಸಮ್ಯಮ ಕಳೆದುಕೊಳ್ಳದೆ ಅದರ ಪ್ರಾಣ ಉಳಿಸಿದ. ಇದನ್ನೆಲ್ಲಾ ದೂರದಿಂದಲೇ ನೋಡುತ್ತಿದ್ದ ಒಬ್ಬ ವ್ಯಕ್ತಿ ಏನಯ್ಯ ಅದು ನಿನಗೆ ಅಷ್ಟು ಕುಕ್ಕಿದರು ಅದರ ಪ್ರಾಣ ಉಳಿಸುತ್ತಿರುವೆಯಲ್ಲಾ ಎಂದು ಕೇಳಿದ. ಆ ಸಾಧು ಅವನಿಗೆ ಕೊಟ್ಟ ಉತ್ತರ ಅನುಸರಣೀಯ 'ಅಯ್ಯಾ ಕುಟುಕುವ ಗುಣ ಅದಕ್ಕೆ ಜನ್ಮತಹ ಬಂದಿದೆ, ಆದರೆ ಅರಿವಿನ ಜನ್ಮದಲ್ಲಿ ಹುಟ್ಟಿರುವ ನಾವುಗಳು ಕುಟುಕುವ ಸ್ವಭಾವದವರನ್ನೂ ಸಹ ಪರಿವರ್ತಿಸಬೇಕು, ಇಂತಹ ಸಂದರ್ಭದಲ್ಲಿ ನಾವು ನಮಗೆ ತೊಂದರೆ ಆದರೂ ಸಹ ಸಹಿಸಿಕೊಳ್ಳಬೇಕು" ಎಂದು ನುಡಿದರು. ಅಷ್ಟರಲ್ಲಿ ಚೇಳು ಪುನಃ ಜಾರಿ ಕೆಳಕ್ಕೆ ಬಿದ್ದಿತು, ಅದನ್ನು ಪುನಃ ಎತ್ತಿ ಬಂಡೆಯಿಂದ ಸ್ವಲ್ಪ ದೂರಕ್ಕೆ ತೆಗೆದುಕೊಂಡು ಹೋಗಿ ಅದನ್ನು ಬಿಟ್ಟ. ಆದರೆ ಈ ಬಾರಿ ಚೇಳು ಆ ಸಾಧುವನ್ನು ಕುಟುಕಲೇ ಇಲ್ಲ, ಏಕೆಂದರೆ
ಅದಕ್ಕೆ ತನ್ನ ಪ್ರಾಣವನ್ನು ಸಾಧುವು ಉಳಿಸುತ್ತಿರುವನೆಂದು ಅರಿತ್ತಿತ್ತು. ಸಾಧುವಿಗೆ ವಂದನೆ ಹೇಳುವಂತೆ ತಲೆ ಎತ್ತಿ ಚೇಳು ಹೊರಟು ಹೋಯಿತು.

ಶರಣ ಬಂಧುಗಳೇ, ಮನುಷ್ಯ ಸ್ವಭಾವತಃ ತನ್ನ ಅಪೇಕ್ಷೆಗಳನ್ನು ಇತರರಿಂದ ಪಡೆಯಲಿಚ್ಛಿಸುವನು, ತಾಯಿ ಮಗುವಿನಿಂದ, ಪತಿ ಪತ್ನಿಯಿಂದ ಅಥವಾ ಪತ್ನಿ ಪತಿಯಿಂದ ಇತ್ಯಾದಿ. ಈ ಸಂದರ್ಭದಲ್ಲಿ ತನ್ನ ಇಚ್ಛೆಗೆ ವಿರುದ್ಧವಾಗಿ ಯಾರಾದರು ವರ್ತಿಸಿದರೆ ಆತನ ಮುನಿಸು ಎಲ್ಲೆ ಮೀರುವುದು. ಎಲ್ಲರೂ ಸಮಾನರೂ, ಎಲ್ಲರೂ ನಮ್ಮಂತೆಯೇ, ಏನೋ ತಿಳಿಯದೆ ಹೀಗೆಲ್ಲಾ ಕೋಪೋ ದ್ರೇಕದಿಂದ ನಡೆದುಕೊಂಡಿದ್ದಾರೆ ಎಂದು ಭಾವಿಸಿ ಇತರರನ್ನು ಕ್ಷಮಿಸುವುದು ಕೇವಲ ಶರಣ ಮಹಾತ್ಮರಿಂದ ಮಾತ್ರ ಸಾಧ್ಯ. ಬೈಬಲ್‌ನಲ್ಲಿ ಒಂದು ಮಾತಿದೆ 'ಯಾರು ಇತರರನ್ನು ಕ್ಷಮಿಸಬಲ್ಲನೋ ಆತನು ಭಗವಂತನಿಂದ ಕ್ಷಮಿಸಲ್ಪಡುವನು". ನಮ್ಮ ತಪ್ಪುಗಳು ನಮಗೆ ಕಾಣವು, ಆದರೆ ನಮಗೆ ಇತರರ ತಪ್ಪುಗಳು ಬಹುಬೇಗನೆ ಕಂಡುಬರುತ್ತದೆ ಅಲ್ಲವೇ? ನಮ್ಮ ತಪ್ಪುಗಳನ್ನು ನಾವು ತಿದ್ದಿ ನಡೆದಾಗ ಮಾತ್ರ ಗುರು ಬಸವಣ್ಣನವರ ಈ ವಚನ ಪರಿಪಾಲನೆ ಮಾಡಲು ನಮಗೆ ಅರ್ಹತೆ ಬರುತ್ತದೆ. ಸಂಬಂಧ ಮುಖಗಳು ಹಲಾವಾರು. ತಂದೆ-ತಾಯಿ, ಪತಿ-ಪತ್ನಿ, ಸಹೋದರ-ಸಹೋದರಿ ಇತ್ಯಾದಿ ಇವುಗಳಲ್ಲಿ ಪರಸ್ಪರ ಶಾಂತಿ ಹಾಗೂ ಪ್ರೇಮತ್ವದ ಬುನಾದಿ ಹಾಕದ ಹೊರತು ಯಾವ ಸಂಬಂಧಗಳು ಗಟ್ಟಿಯಾಗಿ ನೆಲೆನಿಲ್ಲುವುದಿಲ್ಲ. ಪರಸ್ಪರ ತಪ್ಪುಒಪ್ಪುಗಳನ್ನು ಪರಿಗಣಿಸದೆ, ಸದಾಕಾಲವು ನಿಜ ಪ್ರೇಮತ್ವದ ಆಧಾರದ ಮೇಲೆ ಸಂಬಂಧ ಬೆಸೆಯಬೇಕು.
ಇದೇ ಶರಣರು ತಮ್ಮಲ್ಲಿ ಕಂಡುಕೊಂಡ ಸುಮಧುರ ಭಾಂಧವ್ಯದ ಗುಟ್ಟು. ಇದನ್ನು ನಾವು ಪರಿಗಣಿಸಿದರೆ ಮಾತ್ರ ಯಾವುದೇ ಸಂಘಟನೆ-ಸಂಬಂಧ ಗಳನ್ನು ಒಂದು ಮಾಡಲು ಸಾಧ್ಯ. ಯಾರಿಗೆ ನಿಜಪ್ರೇಮತ್ವದ ಅರಿವು ಇರುವುದೋ ಅವರು ಮಾತ್ರ ಇತರರನ್ನು ಕ್ಷಮಿಸಬಲ್ಲನು.

ಈ ಸಂದರ್ಭದಲ್ಲಿ ಗುರು ಬಸವಣ್ಣನವರ ವ್ಯಕ್ತಿತ್ವದ ಕಡೆಗೆ ನಮ್ಮ ಗಮನಹರಿಸುವುದು ಉಪಯುಕ್ತ. ಗುರು ಬಸವಣ್ಣನವರ ವ್ಯಕ್ತಿತ್ವವನ್ನು ಹರಿಹರನು "ಸುವರ್ಣಕ್ಕೆ ಪರಿಮಳ ಬಂದಂತೆ' ಎಂದು ವಿವರಿಸುವರು. ಸುವರ್ಣವು ನೋಡಲು ಬಹು ಸುಂದರ, ಅದಕ್ಕೆ ಒಂದೇ ಒಂದು ಕೊರತೆಯೆಂದರೆ ಸುವಾಸನೆ ಇಲ್ಲದಿರುವುದು. ಅಂತಹ ಸುವರ್ಣಪುರುಷ ಬಸವಣ್ಣನವರಿಗೆ ಅವರ ಸಧಾಚಾರಂಗಳೇ ಪರಿಮಳಯುಕ್ತವಾಗಿ ಜಗತ್ತಿನ ತುಂಬಾ ಪಸರಿಸಿತು, ಬಸವಣ್ಣನವರ ಮನೆಗೆ ಕಳ್ಳ ಬಂದರೂ ಸಹ ಆ ಕಳ್ಳನ ಕೆಟ್ಟತನಕ್ಕೆ ಶಿಕ್ಷಿಸದೆ ಪ್ರೇಮತ್ವದಿಂದ ಆತನನ್ನು ಪರಿವರ್ತಿಸಿದ್ದು ಹಾಗು ಬಸವಣ್ಣನವರನ್ನು ಅಪಹರಿಸಲು ಬಂದ ಜಂಗಮ ವೇಷದ ಕಪಟ ಸನ್ಯಾಸಿಗಳನ್ನೂ ಸಹ ಪರಿವರ್ತಿಸಿದ್ದು ನಾವು ಈಗಾಗಲೇ ಅರಿತಿದ್ದೇವೆ. ಆದರೆ ಇಂದು ನಾವು ಮಾಡುತ್ತಿರುವುದಾದರೂ ಏನು? ಶರಣರು ಶರಣರನ್ನು ಎಡವಿದಾಗ ಕ್ಷಮಿಸುವ ಗುಣವನ್ನು ನಾವು ಬೆಳೆಸುತ್ತಿಲ್ಲ. ಅಲ್ಲದೆ ತಪ್ಪು ಮಾಡಿರುವವರು ಎಂದು ಕಂಡೊಡನೆಯೇ ಕೋಪದ ಮಳೆಗರಿದು ಅಥವಾ ಅವರನ್ನು ಮಾತನಾಡಿಸದೇ ದೂರ ಇರಿಸಿ ನಮ್ಮಲ್ಲಿನ ಕೋಪವನ್ನು ವ್ಯಕ್ತಪಡಿಸುತ್ತೇವೆ. ಇದು ಶರಣ ಮಾರ್ಗದ ಸಹಮತವಲ್ಲ. ಕೋಪದ ಮುಖಗಳಲ್ಲಿ ಇದೂ ಸಹ ಒಂದು. ತನು ಮನದ ಕೋಪ ನಮ್ಮ ಸಾಧನೆಯನ್ನು ಅಧೋಮುಖಕ್ಕೆ ಎಳೆದೊಯ್ಯುವುದು. ಇದನರಿತು ಸರ್ವರಲ್ಲಿಯೂ ಸಂಯಮದಿಂದ, ಸಹಬಾಳ್ವೆಯಿಂದ, ಪ್ರೇಮತ್ವ ಹಾಗು ಶಾಂತಿಯಿಂದ ವರ್ತಿಸುವುದೇ ಸದಾಚಾರ.

ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ
ಮೃದುವಚನವೇ ಸಕಲ ಜಪಂಗಳಯ್ಯಾ
ಮೃದುವಚನವೇ ಸಕಲ ತಪಂಗಳಯ್ಯಾ
ಸದುವಿನಯವೇ ಸದಾಶಿವನೊಲಿಮೆಯಯ್ಯಾ
ಲಿಂಗದೇವ

ಸಂಘಟಣೆಗಳಲ್ಲಿ ಬಿರುಕು ಮೂಡಲು ಪ್ರೇಮತ್ವದ ಮಾತಿನ ಕೊರತೆ ಕಾರಣ. ಎಲ್ಲರೂ ಬಸವತಂದೆಯ ಮಕ್ಕಳೇ, ಒಬ್ಬರಲ್ಲಿರುವ ಗುಣ ಮತ್ತೊಬ್ಬರಿಗೆ ಬರುವುದು ಬಹಳ ಕಷ್ಟ, ಇಂತಹ ಸಂದರ್ಭದಲ್ಲಿ ಸಂಘಟನೆ ಮಾಡುವ ಪ್ರತಿ ವ್ಯಕ್ತಿಯು ಮತ್ತೊಬ್ಬರಿಗೆ ನಿಂದನೆ ಮಾಡುವುದು ಅಥವಾ ಬೇರೆಯವರು ಅರಿತೋ ಅರಿಯದೆಯೋ ಸಂಘಟನೆಯಲ್ಲಿ ತಪ್ಪು ಮಾಡಿದಾಗ ಅದನ್ನು ಮೃದುವಚನ ದಿಂದ ಸರಿಪಡಿಸಬೇಕೆ ಹೊರತು ಹರಿತವಾದ ಮಾತಿನಿಂದ ಮಾಡಕೂಡದು. ಒಂದು ಕೈ ಬೆರಳುಗಳಲ್ಲಿ ಸಮಾನತೆ ಇಲ್ಲ, ಆದರೆ ಐದು ಬೆರಳುಗಳು ಸೇರಿದಾಗ ಮಾತ್ರ ಎಂತಹ ಭಾರವಾದ ಕಲ್ಲನಾದರೂ ಎತ್ತಬಹುದು. ಒಂದು ಬೆರಳು ಕತ್ತರಿಸಲು ಯಾರಾದರೂ ಇಷ್ಟಾಪಡುವರೇ? ಅದೇ ರೀತಿ ಸಂಘದಲ್ಲಿರುವ ಯಾವುದಾದರೂ ವ್ಯಕ್ತಿ ನಮ್ಮ ನಡವಳಿಕೆಗಳಿಂದ ದೂರ ಸರಿದಾಗ, ನಾವುಗಳು ದೂರ ಸರಿದ ವ್ಯಕ್ತಿಯ ಮನವೊಲಿಸಿ ಪುನಃ ಸಂಘಟನೆಗೆ ಅವರನ್ನು ತೊಡಗಿಸಬೇಕೇ ಹೊರತು ಅವರು ಬರದಿದ್ದರೇ ಏನು? ನಾನು ಮಾಡುವೆ ಎಂಬ ಕನಿಷ್ಠ ಭಾವನೆ ಹೊಂದಬಾರದು.



ಅಂತರಂಗ ಬಹಿರಂಗ

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ದೇವರ ಮನೆ ಈ ಜಗವೆಲ್ಲ

ಮಾನವನಿಗೆ ವಾಸಿಸಲು ಮನೆ ಅಗತ್ಯವಾಗಿ ಬೇಕು. ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಒಂದು ಸುಂದರವಾದ ಮನೆ ಕಟ್ಟಿಸಬೇಕು. ನಾನೇ ಕಟ್ಟಿಸಿದ ಮನೆಯಲ್ಲಿ ತಾನು ಜೀವಿಸಬೇಕು ಬದುಕು ಕಟ್ಟಿಕೊಳ್ಳಬೇಕೆಂಬೆ ಆಸೆ ಸಾಮಾನ್ಯವಾಗಿ ಎಲ್ಲರಿಗೂ ಇರುತ್ತದೆ.

ಮಧ್ಯಮ ವರ್ಗದ ಹಾಗೂ ಬಡ ಜನರು ತಮ್ಮ ಜೀವಿತಾವಧಿಯಲ್ಲಿ ಒಂದು ಅಥವಾ ಎರಡು ಮನೆ ಕಟ್ಟಿಸಬಹುದು. ಶ್ರೀಮಂತರು ಅನೇಕ ಸಾರಿ ಮನೆ ಕಟ್ಟಿಸುತ್ತಾರೆ, ಮಾರಾಟ ಮಾಡುತ್ತಾರೆ. ಕೋಟ್ಯಾಂತರ ಬೆಲೆ ಬಾಳುವ ಕಟ್ಟಡಗಳನ್ನು ಹತ್ತಾರು ಊರು, ನಗರಗಳಲ್ಲಿ ನಿರ್ಮಿಸಿರುತ್ತಾರೆ. ಅದು ಅವರಿಗೆ ಲೆಕ್ಕಕ್ಕೇ ಇರುವುದಿಲ್ಲ. ಒಬ್ಬ ವ್ಯಕ್ತಿ ಕಷ್ಟಪಟ್ಟು ದುಡಿದು ಒಂದು ಮನೆ ಕಟ್ಟಿಸಿ ಆ ಮನೆಯಲ್ಲಿ ನಾಲ್ಕಾರು ವರ್ಷ ವಾಸವಾಗಿರುತ್ತಾನೆ. ಅಂದಾಗ ಕುಟುಂಬದವರೆಲ್ಲರೂ ಆ ಮನೆಯ ಬಗ್ಗೆ ಭಾವನಾತ್ಮಕ ಸಂಬಂಧವನ್ನು ಹೊಂದಿರುತ್ತಾರೆ. ಆಕಸ್ಮಾತ್ ಮನೆಯನ್ನು ಮಾರಾಟ ಮಾಡುವ ಸಂದರ್ಭ ಬಂದರೆ, ತಮ್ಮ ಪ್ರಾಣ ಕಳೆದುಕೊಳ್ಳಲು ಸಿದ್ಧರಾಗುತ್ತಾರೆ. ವಿನಃ ಮನೆ ಮಾರಾಟ ಮಾಡುವುದಿಲ್ಲ. ಇಂಥ ಭಾವುಕರೂ ಬಹಳಷ್ಟು ಜನರಿದ್ದಾರೆ.

ಯಾಕೆಂದರೆ ಬಡವರಿಗೆ ಈಗಿನ ಪರಿಸ್ಥಿತಿಯಲ್ಲಿ ಮನೆ ಕಟ್ಟಿಸುವುದೆಂದರೆ ಅಷ್ಟು ಸುಲಭವಾದ ಮಾತೇನಲ್ಲ. ಸಾಲ ಶೂಲ ಮಾಡಿ ಹೇಗೋ ಒಂದು ಆಶ್ರಯ ಮಾಡಿಕೊಳ್ಳುತ್ತಾರೆ. ಅದಕ್ಕಾಗಿಯೇ ಹಿರಿಯರು ಹೇಳಿದ್ದಾರೆ "ಮನೆ ಕಟ್ಟಿ ನೋಡು ಮದುವೆ ಮಾಡಿ ನೋಡು" ಮದುವೆ ಮಾಡುವುದು ಎಷ್ಟು ಕಷ್ಟಕರವೋ ಮನೆ ಕಟ್ಟಿಸುವುದೂ ಅಷ್ಟೇ.

ನಾನೀಗ ಹೇಳುತ್ತಿರುವುದು ದೇವರ ಮನೆಯ ಬಗ್ಗೆ. ಒಂದು ದೊಡ್ಡ ಮನೆ ಕಟ್ಟಿಸಿ ಆ ಮನೆಯೊಳಗೆ ಮೂರಡಿ ಉದ್ದಅಗಲದ ಕೊಠಡಿ ಕಟ್ಟಿಸಿ ಅದನ್ನು ದೇವರ ಮನೆಯೆಂದು ಕರೆಯುತ್ತಾರೆ. ಆ ಚಿಕ್ಕಖೋಲಿ ಮಾತ್ರ ದೇವರ ಮನೆ ಉಳಿದೆಲ್ಲ ಅಲ್ಲವೇ? ಜಗತ್ತೇ ಒಂದು ದೇವರ ಮನೆ. 'ದೇವರ ಮನೆಯಿದು ಈ ಜಗವೆಲ್ಲ ಬಾಡಿಗೆದಾರರು ನಾವುಗಳೆಲ್ಲ' ಎಂಬ ಮಾತು ಅಕ್ಷರಶಃ ಸತ್ಯ.

ಗುಬ್ಬಿ ಹೆರವರ ಮನೆ ತನ್ನ ಮನೆ ಎಂಬಂತೆ ಹೋರಿ ಹೋರಿ ಸಾವುತ್ತಿದೆ ಜೀವ ಎಂದು ವಿಶ್ವಗುರು ಬಸವಣ್ಣನವರು ಹೇಳುವಂತೆ ಸೃಷ್ಟಿಕರ್ತ ಲಿಂಗದೇವನ ಈ ಬ್ರಹ್ಮಾಂಡದ ಮನೆಯಲ್ಲಿ ಮನುಷ್ಯ ತಾನೊಂದು ಚಿಕ್ಕ ಮನೆ ಕಟ್ಟಿಕೊಂಡು ಇದು ತನ್ನ ಮನೆ ಎಂದು ದೇವರನ್ನೇ ಮರೆಯುವವರಲ್ಲ ಅವರು ಕೃತಘ್ನರು. ಗೃಹಸ್ಥರು ಮನೆ ಕಟ್ಟಿಸಬಾರದಂತಲ್ಲ. ಗುರು-ಲಿಂಗ-ಜಂಗಮ ಸೇವೆ ಮಾಡುವ ಮೂಲಕ ದೇವರಿಗೆ ಬಾಡಿಗೆ ಸಲ್ಲಿಸುವವರೆ ನಿಜವಾದ ಜಾಣರು ಅವರೇ ಶರಣರು. ಹಿಂದೆ ಗುರು ಮುಂದೆ ಗುರಿಯಿಟ್ಟುಕೊಂಡು ಸಮರ್ಥರಾದ ಜ್ಞಾನಿ, ತ್ಯಾಗಿ ಗುರುವಿನ ಮಾರ್ಗದರ್ಶನದಲ್ಲಿ ನಡೆದಾಗ ಜೀವನ ಸುಂದರವಾಗುತ್ತದೆ. ಬದುಕು ಬಂಗಾರವಾಗುತ್ತದೆ. ಪರಮ ಸುಖ ಪ್ರಾಪ್ತಿಯಾಗುತ್ತದೆ.

ಇಷ್ಟಲಿಂಗೋಪಾಸನೆ ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



ವಾಕ್:

"ಮಾತು ಬೆಳ್ಳಿ
ಮೌನ ಬಂಗಾರ"

ಎಂಬುದು ಉಕ್ತಿ. ಬೆಳ್ಳಿ ಎಷ್ಟು ಶುಭ್ರವಾಗಿದೆಯೋ ಅಷ್ಟು ಶುಭ್ರತೆಯಿಂದ ಪರಿಶುದ್ಧತೆಯಿಂದ ಕೂಡಿರಬೇಕು. ಮಾತುಗಳು ಜ್ಞಾನಜ್ಯೋತಿಯನ್ನು ಹೊತ್ತಿಸುವಂಥವುಗಳಾಗಿರುಬೇಕು. ಅದಕ್ಕೆ ವಚನ ಸಾಕ್ಷಿಯಾಗಿದೆ. "ಮಾತೆಂಬುದು ಜ್ಯೋತಿರ್ಲಿಂಗ ಸ್ವರವೆಂಬುದು ಪರತತ್ವ ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ".

ಇದು ಮಾತಿನ ಸೌಂದರತೆ ಶೈಲಿ, ಶುದ್ಧತೆ ಮತ್ತು ಮಹಾನುಭಾವ. ಗುರು ಬಸವಣ್ಣನವರು ಕಳಬೇಡ, ಕೊಲಬೇಡ ಎಂಬ ಸಪ್ತ ಸೂತ್ರಗಳನ್ನು ಪಾಲಿಸಲು ಹೇಳಿ ಕೊನೆಯಲ್ಲಿ ಅಂತರಂಗ ಬಹಿರಂಗ ಶುದ್ಧಿಯೊಡನೆ ಲಿಂಗದೇವನ ಒಲಿಸುವ ಗೌಪ್ಯ ಮಾರ್ಗವನ್ನು ತಮಗೆ ಹಾಗೂ ಜಗತ್ತಿನ ಜನರಿಗೆಲ್ಲ ಉಪದೇಶಿಸಿದ್ದಾರೆ. ಮಾತು ಬೆಳ್ಳಿ, ಮುತ್ತಿನ ಹಾರ, ಮಾಣಿಕ್ಯದ ದೀಪ್ತಿ, ಸ್ಫಟಿಕದ ಸಲಾಕೆ, ಲಿಂಗಮೆಚ್ಚಿ ಅಹುದಹುದೆನ್ನುವಂತಹದು. ಇದು ವಾಕನ ಲಿಂಗಯೋಗದ ಪರಿ.

ಪಾಣಿ: ಕೈಗಳ ಪಾತ್ರ ಬಹಳ ಮಹತ್ವದ್ದು. ಎಡದ ಕೈಯಲ್ಲಿ ಇಷ್ಟಲಿಂಗವನ್ನಿಟ್ಟು ಪೂಜಿಸಿ ದೃಷ್ಟಿಯೋಗವನ್ನು ಮಾಡುತ್ತಾ ಬಲಗೈಯಿಂದ ರುದ್ರಾಕ್ಷಿ ಮಣಿಗಳಿಂದ ಮಂತ್ರ ಜಪವನ್ನು ಎಷ್ಟು ಬೇಕಾದಷ್ಟು ಸಮಯ ಮಾಡುವುದು ಕರಗತವಾದರೆ ಅದು ಲಿಂಗಯೋಗ ಕರಗಳಿಗೆ. ಸತ್ಪಾತ್ರಕ್ಕೀಯುತ್ತಿದ್ದರೆ ಪ್ರಸಾದ ಸ್ವೀಕರಿಸುತ್ತಿದ್ದರೆ ಪ್ರಸಾದ ಕೊಡುತ್ತಿದ್ದರೆ, ದಾನ ಧರ್ಮದ ಕಾರ್ಯಗಳನ್ನು ಮಾಡುತ್ತಿದ್ದರೆ, ಸದ್ಗುರುಗಳ ಪಾದ ಸೇವೆಯನ್ನು ಮಾಡುತ್ತಿದ್ದರೆ, ಒಟ್ಟಾರೆ ಗುರು-ಲಿಂಗ-ಜಂಗಮದ ಸೇವೆಯನ್ನು ಆಪ್ತ-ಅಂಗ-ಸ್ಥಾನ-ಭಾವಗಳಿಂದ ತ್ರಿಕರಣ ಶುದ್ಧವಾಗಿ ಮಾಡುತ್ತಿದ್ದರೆ ಅದು ಲಿಂಗಯೋಗ.

ಪಾದ : ಪಾದಗಳು ಅದ್ಭುತ ಶಕ್ತಿಯುಳ್ಳವುಗಳು. ಶರಣರು ಮಾಹಾತ್ಮರು, ಯೋಗಿಗಳು ತಪಸ್ಸು ಅನುಷ್ಠಾನ ಮಾಡಿದ ಶಕ್ತಿ ಸಾಮರ್ಥ್ಯ ಪಾದಗಳಲ್ಲಿ ಇರಿಸಿಕೊಂಡಿರಬೇಕು. ಅವರ ಪಾದ ದರ್ಶನ, ಸ್ಪರ್ಶನದಿಂದ ಪಾಪ ನಿವಾರಣೆಯಾಗಬೇಕು. ಪುಣ್ಯದ ಕಾರ್ಯಗಳು ಹೆಚ್ಚು ಹೆಚ್ಚು ಆಗುತ್ತಾ ಹೋಗಿ ಪುಣ್ಯದ ಮೂರ್ತಿಯನ್ನಾಗಿ ಮಾರ್ಪಡಿಸುವುದೆ ಪಾದಗಳ ಲಿಂಗಯೋಗ.

ಗುದ : ಆಧಾರ ಸ್ಥಾನ ಅಥವಾ ಗುದಸ್ಥಾನ ಇದೊಂದು ಅದ್ಭುತವಾದ ಇಂದ್ರಿಯ. ಲಿಂಗಯೋಗಿಗಳಿಗೆ, ಪ್ರಾಕೃತಿಕ ಪ್ರಾಣವನ್ನು ಲಿಂಗಪ್ರಾಣವನ್ನಾಗಿಸುವ ಈ ಸ್ಥಾನದಿಂದ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಸಹಸ್ರಾರ, ಶಿಖಾ, ಪಶ್ಚಿಮ ಚಕ್ರದ ವರೆಗೆ ಕುಂಡಲಿನಿ ಶಕ್ತಿಯನ್ನು ಸಾಹಸಿಯಾದ ಸಾಧಕ ಒಯ್ದು ನಿಜ ಮುಕ್ತಿಯ ಪದವನ್ನು ಪಡೆಯುವುದಾಗಿದೆ. ಮಹಾಜ್ಞಾನದ ಬೆಳಗನ್ನು ತನ್ನದಾಗಿಸುವ



ಕಾರ್ಯ ಈ ಸ್ಥಾನದಿಂದಲೇ ಕೈಕೊಳ್ಳಬಹುದಾಗಿದೆ. ಈ ಆಧಾರದ ಬಗ್ಗೆ ತೋಂಟದ ಸಿದ್ಧಲಿಂಗೇಶ್ವರ ಯತಿಗಳು ಹೀಗೆ ಅಭಿಮಾನ ಆದರ ಗೌರವಗಳಿಂದ ಗುರು ಬಸವಣ್ಣನವರ ಭಕ್ತತ್ವವನ್ನು ಹೃದಯಂಗಮವಾಗಿ ಕಿಂಕರತ್ವವನ್ನು ಸಾದರ ಪಡಿಸಿದ್ದಾರೆ.

ಕಾಯಕ್ಕಾಧಾರ ಭಕ್ತ, ಕರಣಕ್ಕಾಧಾರ ಭಕ್ತ, ಭಕ್ತಿಗಾಧಾರ ಭಕ್ತ, ಶಕ್ತಿಗಾಧಾರ ಭಕ್ತ, ಎನಗಾಧಾರ ಭಕ್ತ, ನಿನಗಾಧಾರ ಭಕ್ತ, ನಿಮ್ಮ ಭಕ್ತ ಸಂಗನ ಬಸವಣ್ಣನ ಶ್ರೀಪಾದ ಪದ್ಮದಲ್ಲಿ ಎನ್ನ ಭ್ರಮರನಾಗಿರಿಸಯ್ಯಾ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ.

ಇಂಥಹ ಆಧಾರಸ್ಥಾನವಾದ 'ಗುದ'ವನ್ನು ಲಿಂಗಯೋಗದಲ್ಲಿ ತೊಡಗಿಸುವವರು ಕೋಟಿಗೊಬ್ಬರು ದೊರೆಯುತ್ತಾರೆ. ಏಕೆಂದರೆ ಪ್ರಾಕೃತಿಕವಾಗಿ ಸರ್ವೇ ಸಾಮಾನ್ಯ ದಿನನಿತ್ಯ ಸಾಯುತ್ತಾರೆ ಮಲಗಿಕೊಂಡಾಗ. ಒಂದು ಜೋಕ್ ನೆನಪಾಗುತ್ತದೆ, ಹಳ್ಳಿಯಲ್ಲಿ ಬೆಳಿಗ್ಗೆ ಯಾರಾದರೂ ಭೇಟಿಯಾದರೆ 'ಎದ್ದಿರಾ?' ಎಂದು ಪ್ರಶ್ನೆ ಮಾಡುತ್ತಾರೆ. ಆಗ ಹೌದು ಎದ್ದಿದ್ದೇವೆ ಅನ್ನುತ್ತಾರೆ. ಏಕೆಂದರೆ ಮಲಗಿದಾಗ ಅದು 'ಚಿಕ್ಕುಟ ಸಾವು' ಎನ್ನುತ್ತಾರೆ ಅಲ್ಲಮಪ್ರಭುದೇವರು. ಇನ್ನು ಆಧಾರದಲ್ಲಿ ಮಡಗಿಕೊಂಡಿರುವ ಕುಂಡಲಿನಿ ಶಕ್ತಿಯನ್ನು ಪಶ್ಚಿಮ ಚಕ್ರದವರೆಗೆ ಲಿಂಗಪ್ರಾಣವನ್ನಾಗಿಸಿಕೊಂಡು ಏರಿಸಿ ನಿಲ್ಲಿಸಬೇಕಾದರೆ ಆಧ್ಯಾತ್ಮಿಕವಾಗಿ ಸತ್ತಂತೆ ಸರಿ. ಇದು ಗುದಸ್ಥಾನದ ಲಿಂಗಯೋಗ.

ಗುಹ್ಯ : ಇದೂ ಒಂದು ಅದ್ಭುತ ಶಕ್ತಿ ಸಾಮರ್ಥ್ಯವುಳ್ಳ ಕರ್ಮೇಂದ್ರಿಯ. ಈ ಭೂಮಿಯ ಮೇಲೆ ಜೀವವನ್ನು ಹೊಂದಿರುವ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಕ, ಪಶು, ಮಾನವರನ್ನು ಉತ್ಪತ್ತಿ ಮಾಡುವ ಗುಣವುಳ್ಳದ್ದು. ಇದರ ವಿರುದ್ಧವಾಗಿ ಊರ್ಧ್ವರೇತೀಕರಣದಿಂದ ಅಮೃತಪಾನ ಮಾಡಿ ಜನನ-ಮರಣ ರೂಪ ಭವವನ್ನು

ಗೆಲುವಂಥ ಸನ್ಮಾರ್ಗ. 'Utilisation of sex or Sublimation of sex' But Suppression of sex is more dangerous ಎಷ್ಟೋ ಜನ ಮನು-ಮುನಿ-ಯೋಗಿಗಳನ್ನು ಮಾಯೆ ಈ ಸುಖದಲ್ಲಿ ಸಿಲುಕಿಸಿ ಪತಿತರನ್ನಾಗಿ ಮಾಡಿದ ಪ್ರಸಂಗಗಳನ್ನು ಇತಿಹಾಸದಲ್ಲಿ ನಾವು ಗಮನಿಸುತ್ತೇವೆ. ಕಾರಣ ಇದೆಲ್ಲವನ್ನೂ ಅವಲೋಕಿಸಿ ಆತ್ಮ ಸಾಕ್ಷಾತ್ಕಾರ ಗುರುವಿನ ಆಶೀರ್ವಾದ, ದೇವರ ಕರುಣೆ ಅತ್ಯವಶ್ಯವಾಗಿ ಇದ್ದು ಉತ್ಕೃಷ್ಟವಾದ ನಿರಂತರ ಸಾಧನೆ ಶರಣರ ಮಹಾತ್ಮರ ಸಂಗದಿಂದ ಮಾತ್ರ ಸಾಧ್ಯವಾಗುವುದು 'ಗುಹ್ಯ'ವು ಲಿಂಗ ಯೋಗದಲ್ಲಿ ತಲ್ಲೀಯವಾದಾಗ ವೈಯಕ್ತಿಕವಾಗಿ 40 ವರ್ಷಗಳಿಂದ ನಿರಂತರ ಸಾಧನೆಯ ಫಲವಾಗಿ ಈಗೀಗ 108 ದೇವಮಂತ್ರ ಜಪ ಆಗುವುದರೊಳಗೆ ಪಶ್ಚಿಮ ಚಕ್ರದ ವರೆಗೆ ಹೋಗಿ ಸ್ಥಾಯಿಯಾಗಿ ನಿಲ್ಲುವ ಛಲಗಾರಿಕೆ ಒದಗಿರುವುದು ಎಷ್ಟೋ ಜನ್ಮದ ಪುಣ್ಯ, ಸದ್ಗುರುವಿನ ಕರುಣೆಯೇ ಸರಿ.

ಇನ್ನು ನೇತ್ರ ತ್ವಕ್ಕು ಶೋತ್ರ ಜಿಹ್ವೆ ಘ್ರಾಣ (ಕಣ್ಣು, ಚರ್ಮ, ಕಿವಿ, ನಾಲಿಗೆ, ಕಿವಿ) ಜ್ಞಾನೇಂದ್ರಿಯಗಳ ಲಿಂಗಯೋಗದ ಬಗ್ಗೆ ವಿಶ್ಲೇಷಿಸೋಣ.

ನೇತ್ರ : ಈ ನೇತ್ರಗಳು ಅಂತರಂಗದ ಜ್ಞಾನನೇತ್ರವನ್ನು ಅಂತಃಚಕ್ಷುವನ್ನು, ಅರಿವಿನ ಕಣ್ಣನ್ನು, ದೈವೀಪ್ರಜ್ಞೆಯನ್ನು ತೆರೆಯಿಸುವುದಕ್ಕೆ ನೂರಕ್ಕೆ ನೂರರಷ್ಟು ಸಹಕಾರಿಯಾಗಿವೆ. ಜಗತ್ತಿನ ಎಲ್ಲ ದೃಶ್ಯಗಳನ್ನು ನೋಡುತ್ತವೆ. ಇದು ಸಹಜವಾಗಿದ್ದು. ಆದರೆ ಮಾನವನ ಅಂತರಂಗದಲ್ಲಿ ಹುದುಗಿದ ಆತ್ಮನ ಅಸ್ತಿತ್ವ, ನೆಲೆ, ಕಲೆ, ಪರಂಜ್ಯೋತಿ ದರ್ಶನ, ಸಾಕ್ಷಾತ್ಕಾರಕ್ಕೆ ಈ ನೇತ್ರಗಳು ಎಡ ಅಂಗೈಯಲ್ಲಿಟ್ಟ ಇಷ್ಟಲಿಂಗದ ಮೇಲೆ ಬಲ ಭುಜದ ಎತ್ತರಕ್ಕೆ ಇಟ್ಟ ದೀಪದ ಕಿರಣದ ಮೇಲೆ ಅನಿಮಿಷ ದೃಷ್ಟಿಯಿಂದ ಮಾಡುವ ಸಾಧನೆಗೆ ಬಲು ಮುಖ್ಯ ಪಾತ್ರವಹಿಸುವುವು. ಇದು ನೇತ್ರಕ್ಕೆ ಸಂಬಂಧಪಟ್ಟ ಲಿಂಗಯೋಗ.

ವಚನ: ಕಂಗಳ ನೋಟ, ಹೃದಯದ ಜ್ಞಾನ, ಮನದಲ್ಲಿ ಮಾತನಾಡುವೆ ಜೇನಮಳೆಗಳು ಸುರಿದಾವು, ಅಮೃತ ಬಿಂದುಗಳು ಕರೆದಾವು ಲಿಂಗದೇವನೆಂಬ ರಸಸಾಗರದೊಳಗೆ ಓಲಾಡುತ್ತಿದ್ದೆನಯ್ಯಾ

ತ್ವಕ್ಕು : ಶರೀರದ ತುಂಬೆಲ್ಲ ರೋಮಗಳಿಂದ ಕೂಡಿದ ಚರ್ಮವಿದೆ. ನಿರ್ವಿಷಯವಾದ ಆನಂದದ ಉನ್ಮಾದದಲ್ಲಿದ್ದಾಗ ಎಲ್ಲ ರೋಮಗಳು ಪುಳಕಿತವಾಗಿ ಮೈತುಂಬ ಬೆಮರ ಬಿಂದುಗಳು ಸುರಿಯುವುವು. ಭೌತಿಕ ಯಾವ ಸೋಂಕು ಇಲ್ಲದೇ ಆಧ್ಯಾತ್ಮದ ತುಟ್ಟ ತುದಿಯನ್ನೇರಿದಾಗ ಚರ್ಮ ದೈವೀಮಯವಾಗಿರುತ್ತದೆ.

ಇದು ಚರ್ಮಕ್ಕೆ ಸಂಬಂಧಪಟ್ಟ ಲಿಂಗಯೋಗ.

ಶ್ರೋತ್ರ : ಕಿವಿಗಳು ಜಗತ್ತಿನ ಎಲ್ಲ ಮಾತು, ಸಂಗೀತ, ಹಾಡು, ಉಪನ್ಯಾಸ, ಪ್ರವಚನಗಳನ್ನು ಕೇಳುತ್ತವೆ. ಇವೆಲ್ಲ ಆಹತನಾದ ಶಬ್ದ ಆದರೆ ಒಳಗೊಂದು ಅನಾಹತ ನಾದವಿದೆ. ಅದು ಓಂಕಾರ ನಾದ. "ಒಂದ ಕೋಳಿ ಕೂಗುತದೆ ಇರುಳು ಹಗಲೆನ್ನದೆ, ಅದನರಿಯರಲ್ಲಾ ಮರ್ತ್ಯದ ಗಣಂಗಳು. ಅರಿದಡೆ ಭವಬಂಧನವಿಲ್ಲ. ಮರೆದಡೆ ಜನನ-ಮರಣಕ್ಕಳವಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನಾ". ಎಂದು ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಯಾವ ಶಬ್ದ, ನಾದ, ಸ್ವರ, ಕೇಳಬೇಕೆಂಬುದನ್ನು ನಿಶ್ಚಯವಾಗಿ ಅರಹುತ್ತಲಿದ್ದಾರೆ. ಕಿವಿಗಳು ಮಹಾತ್ಮರ, ಜ್ಞಾನಿಗಳ, ಯೋಗಿಗಳ, ಸಂತರ, ಶರಣರ, ನುಡಿಗಳನ್ನು ಕೇಳುವುದರಲ್ಲಿ ದೇವರ ಗುಣಗಾನವನ್ನು ಮಹಿಮೆಯನ್ನು ಆಲಿಸುವುದರಲ್ಲಿ ತೊಡಗಿಸಿಕೊಂಡರೆ ಅದು ಲಿಂಗಯೋಗ.


ಜಿಹ್ವೆ : ನಾಲಿಗೆಯು ಎಷ್ಟು ಮೃದುವಾಗಿದೆಯೋ ಅದರ ನೂರುಪಟ್ಟು ಒಮ್ಮೊಮ್ಮೆ ಅಷ್ಟೇ ಒರಟಾಗುವುದು. ನಾಲಿಗೆಯನ್ನು ಹಿಡಿತದಲ್ಲಿ ಇಟ್ಟುಕೊಂಡಾಗ ಮಾತು ಮಂತ್ರವಾಗುವವು. ಆಹಾರ ಪದಾರ್ಥ, ಪಾನೀಯಗಳನ್ನು ಸ್ವೀಕರಿಸುವಾಗ

ಪುಟ 15ರಲ್ಲಿ ಮುಂದುವರಿಯುವುದು

ಮಹಾನ್ ಶರಣ

ಮಡಿವಾಳ ಮಾಚಿದೇವರು

ಜಯಂತಿ ಮೇ 1



12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದಾದ ಸಮಗ್ರ ಆಂದೋಲನದಲ್ಲಿ ಪ್ರಮುಖಪಾತ್ರ ವಹಿಸಿದ ಹಿರಿಯ ಚೇತನ ಮಡಿವಾಳ ಮಾಚಿದೇವರು. ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮದ ಷಡ್ ಗಣಾಧೀಶರಲ್ಲಿ ಮಾಚಿದೇವರು ಒಬ್ಬರಾಗಿದ್ದರು.

ಇವರ ಜನ್ಮಕ್ಷೇತ್ರ ವಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ ಮತ್ತು ಕಾರ್ಯಕ್ಷೇತ್ರ ಕಲ್ಯಾಣವಾಗಿತ್ತು. ದೇವರ ಹಿಪ್ಪರಗಿಯ ಬಟ್ಟೆ ತೊಳೆಯುವ ಕೆಲಸದ ಶಿವಭಕ್ತರಾದ ಪರ್ವತಪ್ಪನವರ ಮಗನಾಗಿ ಜನಿಸಿದರು. ತಾಯಿ ಸುಗ್ಗಲವ್ವ ಎಂದು ತಿಳಿದು ಬರುತ್ತದೆ. ಅವರ ವಚನಾಂಕಿತ ಕಲಿದೇವರದೇವ.

ಮೊದಲು ಇವರು ಬಿಜ್ಜಳರಾಜನ ಸೈನ್ಯದಲ್ಲಿ ಅಧಿಕಾರಿಯಾಗಿದ್ದರು. ಬಸವಣ್ಣನವರ ಪ್ರಭಾವದಿಂದ ಶರಣರಾದ ಮೇಲೆ ಬಸವಾದಿ ಪ್ರಮಥರ ಮೈಲಿಗೆ ಬಟ್ಟೆ ತೊಳೆಯುವ ಕಾಯಕ ಕೈಕೊಂಡರು.

ಭವಿಜನರ ಬಟ್ಟೆಗಳನ್ನು ತೊಳೆಯುವುದಿಲ್ಲ ಎಂದು ಮಾಚಿದೇವರು ಘೋಷಿಸುತ್ತಾರೆ. ಆಗ ಕುತಂತ್ರಿಗಳ ಚಾಡಿ ಮಾತು ಕೇಳಿ ಬಿಜ್ಜಳನು ಮದವೇರಿದ ಆನೆಯನ್ನು ಮಾಚಿದೇವರ ಮೇಲೆ ಬಿಟ್ಟಾಗ ಆನೆಯನ್ನು ಎದುರಿಸಿ ಹೋರಾಡಿ ಅದರ ಸೊಕ್ಕನ್ನು ಮುರಿಯುತ್ತಾರೆ.

ಬಸವಾದಿ ಪ್ರಮಥರ ಮೈಲಿಗೆ ಬಟ್ಟೆಗಳನ್ನು ತೊಳೆಯುವ ಕಾಯಕದೊಂದಿಗೆ ಎಲ್ಲ ಶರಣರ ಮಲಿನ ಮನವನ್ನು ತೊಳೆಯುವ ಕಾಯಕದಲ್ಲಿಯೂ ನಿರತರಾಗಿದ್ದರು.

ಸಮಗಾರ ಹರಳಯ್ಯನವರ ಮಗ ಶೀಲವಂತ ಹಾಗೂ ಬ್ರಾಹ್ಮಣ ಮಧುವರಸರ ಮಗಳು ಲಾವಣ್ಯವತಿಯರ ವಿವಾಹ ನೆರವೇರಿಸಿದ ನಂತರ ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗಿ ಧರ್ಮಪಿತ ಬಸವಣ್ಣ ಪ್ರಧಾನಿಪಟ್ಟ ತೊರೆದು ಕೂಡಲಸಂಗಮಕ್ಕೆ ಹೋದರು. ನಂತರ ಕಲ್ಯಾಣದಲ್ಲಿ ಕ್ರಾಂತಿಯಾಗಿ ಜಾತಿವಾದಿಗಳು ಬಿಜ್ಜಳನ ಸೈನ್ಯದ ಸಹಾಯದಿಂದ ವಚನ ಸಾಹಿತ್ಯವನ್ನು ನಾಶ ಮಾಡಿ ವಿಶ್ವದ ಪ್ರಪ್ರಥಮ ಪ್ರಜಾಪ್ರಭುತ್ವ ಸ್ಥಾಪನೆ ಅಳಿಸಿಹಾಕಲು ಪ್ರಯತ್ನ ಮಾಡಿದರು. ಎದುರಾದ ಶರಣರನ್ನು ಕೊಲ್ಲುತ್ತಾ ಹೊರಟರು.

ಷಟ್‌ಸ್ಥಲ ಜ್ಞಾನಿ ವೀರಯೋಗಿ ಚೆನ್ನಬಸವಣ್ಣನವರ ನೇತೃತ್ವದಲ್ಲಿ ವಚನಸಾಹಿತ್ಯ ಸಂರಕ್ಷಿಸಲು ಶರಣರ ಒಂದು ತಂಡ ಸಿದ್ಧವಾಯಿತು. ಮಾಚಿದೇವರು ತಂಡದ ದಂಡನಾಯಕರಾದರು. ಇನ್ನುಳಿದ ಶರಣರು ತಮ್ಮ ಶಕ್ತ್ಯಾನುಸಾರ ವಚನಸಾಹಿತ್ಯವನ್ನು ಬೆನ್ನಿಗೆ ಕಟ್ಟಿಕೊಂಡು, ತಲೆ ಮೇಲೆ ಹೊತ್ತು ಎಲ್ಲ ದಿಕ್ಕುಗಳಲ್ಲಿ ತಾವು ಬಂದು ದೇಶಕೋಶಗಳಿಗೆ ಹೊರಟು ವಚನಸಾಹಿತ್ಯವನ್ನು ರಕ್ಷಿಸಿದರು.

ಇಷ್ಟಲಿಂಗೋಪಾಸನೆ

ವೈಜ್ಞಾನಿಕ ಅರಿವು

ಎಚ್ಚರಿಕೆಯಿಂದ ದೈವೀಭಾವನೆಯಿಂದ ಎಷ್ಟು, ಯಾವಾಗ, ಹೇಗೆ ಎಂಬುದನ್ನು ಗಮನಿಸಿ ಜೀವನ ನಡೆಸಿದರೆ ಅದು ಲಿಂಗಯೋಗ. ಮಾತು-ರುಚಿ ಮಂತ್ರವಾದರೆ ಅಮೃತವಾಗುವುವು. ಇದರಿಂದ ದೈವತ್ವ ಪ್ರಾಪ್ತಿಯಾಗುವುದು.

ಘ್ರಾಣ : ಜೀವಾತ್ಮನು ಜೀವಂತವಾಗಿ ಇದ್ದಾನೋ ಅಥವಾ ಶರೀರದಿಂದ ಬೇರೊಂದು ಶರೀರದಲ್ಲಿ ಕರ್ಮಾನುಸಾರ ಪ್ರಯಾಣ ಬೆಳೆಸಿದ್ದಾನೆಂಬುದು ಮೂಗಿನ ಮುಖಾಂತರ ನಮಗೆ ಮಾಹಿತಿ ದೊರೆಯುವುದು. ಶ್ವಾಸೋಚ್ಛ್ವಾಸ ಕ್ರಿಯೆ ಸರಿಯಾಗಿ ನಡೆದಿದೆ ಅಥವಾ ನಡೆದಿಲ್ಲ ಎಂಬುದು ಮೂಗಿನ ಸಮೀಪ ಹಸ್ತವನ್ನಿಟ್ಟಾಗ ಗೊತ್ತಾಗುತ್ತದೆ. ಪ್ರಾಕೃತಿಕವಾದಂಥಹ ಪ್ರಾಣವಾಯುವನ್ನು ಆಧಾರಾದಿ ಪಶ್ಚಿಮ ಚಕ್ರದ ವರೆಗೆ ಲಿಂಗಪ್ರಾಣವನ್ನಾಗಿ ಎಡ ಅಂಗೈಯಲ್ಲಿಟ್ಟ ಇಷ್ಟಲಿಂಗದ ಮೇಲೆ ದೃಷ್ಟಿಯೋಗವನ್ನು ದೇವಮಂತ್ರ ಜಪ ಮಾಡುತ್ತಾ ಹೋಗುವುದೇ ಘ್ರಾಣದ ಲಿಂಗಯೋಗ. "ವಾಸನಾಕ್ಷಯವೇ **ಮೋಕ್ಷ**" ಅಂತಾ ಆಧ್ಯಾತ್ಮದ ದೃಷ್ಟಿಯಿಂದ ಹೇಳುವಂತಹದ್ದು. ಕೆಟ್ಟವಾಸನೆ ಯಾರಿಗೂ ಬೇಡ. ಒಳ್ಳೆಯ ಸೌಗಂಧದಿಂದ ಕೂಡಿದ ಸುವಾಸನೆ ಸರ್ವರಿಗೂ ಬೇಕಾದದ್ದು. ಅದೇ ರೀತಿ ದೇವರಲ್ಲಿ ಸದ್ಗುರುವಿನಲ್ಲಿ ಬೇಡಿಕೊಳ್ಳುವುದೇನೆಂದರೆ –ನನಗೂ ಮತ್ತು ಸಕಲ ಜೀವಾತ್ಮರಿಗೂ ಒಳ್ಳೆಯದಾಗಲಿ ಎಂಬ ಉಸಿರು ಪ್ರಾಣವಾಗಿರಬೇಕು. ಇದು ಘ್ರಾಣದ ಲಿಂಗಯೋಗ.

ಇನ್ನು ಮನ, ಬುದ್ಧಿ, ಚಿತ್ತು, ಅಹಂಕಾರಗಳೆಂಬ ಅಂತಃಕರಣಗಳ ಲಿಂಗಯೋಗದ ಬಗ್ಗೆ ವಿವೇಚಿಸುವಾ.

ಮುಂದುವರಿಯುವುದು...





ಧಾರವಾಡದಲ್ಲಿ ಶರಣೋತ್ಸವ ಸುಮಧುರ ಕ್ಷಣಗಳು









ಧಾರವಾಡದಲ್ಲಿ ಶರಣೋತ್ಸವ ಸುಮಧುರ ಕ್ಷಣಗಳು

ಹಿರಿಯರು?!



ವಚನವಾಣಿ

ಮಾತೆ ಕಸ್ತೂರಿದೇವಿ

ಓದಿನ ಹಿರಿಯರು, ವೇದದ ಹಿರಿಯರು, ಶಾಸ್ತ್ರದ ಹಿರಿಯರು,
ಪುರಾಣದ ಹಿರಿಯರು, ವೇಷದ ಹಿರಿಯರು, ಭಾಷೆಯ ಹಿರಿಯರು,
ಇವರೆಲ್ಲರು ತಮ್ಮ ತಮ್ಮನೆ ಮೆರೆದರಲ್ಲದೆ ನಿಮ್ಮ ಮೆರೆದುದಿಲ್ಲ.
ತಮ್ಮ ಮರೆದು ನಿಮ್ಮ ಮೆರೆದಡೆ ಕೂಡಿಕೊಂಡಿಪ್ಪ ನಮ್ಮ ಲಿಂಗದೇವರು.

ಹಿರಿಯರು ಎಂದಾಕ್ಷಣ ನಮ್ಮ ಸ್ಮರಣೆಗೆ ಬರುವುದು ಗುರು ಬಸವಣ್ಣನವರು ತಮ್ಮ ಮತ್ತೊಂದು ವಚನದಲ್ಲಿ ಹೇಳಿರುವಂತೆ ಚರ್ಮ ಸುಕ್ಕುಗಟ್ಟಿದ ಮುಖದಲ್ಲಿ ಬೊಚ್ಚುಬಾಯಿ, ತಲೆಯಲ್ಲಿ ಬಿಳಿ ಕೂದಲು, ಬಾಗಿದ ಶರೀರ, ಕಣ್ಣು ಮಸುಕಾಗುವುದು, ಕಿವಿ ಕೇಳದಿರುವುದು, ಕೈಯಲ್ಲೊಂದು ಊರುಗೋಲು–ಇಂಥ ಧಾರುಣಚಿತ್ರ ಕಣ್ಣ ಮುಂದೆ ಬರುತ್ತದೆ. ನಮ್ಮ ಭಾರತೀಯ ಸಂಸ್ಕ್ರತಿಯ ಕುಟುಂಬ ಪದ್ಧತಿಯಲ್ಲಿ ಇಂಥ ವಯೋವೃದ್ಧರಿಗೆ ಗೌರವಸ್ಥಾನವಿದೆ. ವಯಸ್ಸಿನಿಂದ ಕಿರಿಯರಾದವರು ಇಂಥ ವಯೋವೃದ್ಧರನ್ನು ಗೌರವಪೂರ್ವಕವಾಗಿ ನಡೆಸಿಕೊಳ್ಳಬೇಕೆಂಬ ನಿಯಮವಿದೆ. ಹೀಗೆ ತಾವೇ ಸಾಕಿ ಬೆಳೆಸಿ ಸೃಷ್ಟಿಸಿದ ಸಂಬಂಧಗಳಿಂದ ಸಿಗುವ(ನಿರೀಕ್ಷಿಸುವ) ಮರ್ಯಾದೆ ಮತ್ತು ಕಾಳಜಿಯಿಂದ ಅವರು ತಮ್ಮ ಇಳಿವಯಸ್ಸನ್ನು ಆನಂದ ಮತ್ತು ಸಂತೃಪ್ತಿಯಿಂದ ಕಳೆಯಲು ಅನುಕೂಲವಾಗುತ್ತದೆ. ಅಂದಿನ ಕುಟುಂಬದ ಇಂಥ ಮೌಲ್ಯವರ್ಧಿತ ವ್ಯವಸ್ಥೆಯು ಸಾಮಾಜಿಕ ಸ್ವಾಸ್ಥ್ಯಕ್ಕೆ ಕಾರಣವಾಗುತ್ತಿತ್ತು.



ಆದರೆ ಇತ್ತೀಚಿನ ದಿನಗಳಲ್ಲಿ ಆಗುತ್ತಿರುವುದೇನು?! ಇಂದಿನ ಸಾಮಾಜಿಕ ಜೀವನಶೈಲಿಯಿಂದಾಗಿ ಹಳೆ ಮತ್ತು ಹೊಸ ಜನಾಂಗ(ತಲೆಮಾರು)ದ ಪರಸ್ಪರ ಅರಿವಿನ ಕೊರತೆ-ಯ ಅಂತರ ಬಹಳಷ್ಟು ವಿಸ್ತಾರವಾಗಿ ಹಬ್ಬುತ್ತಿದ್ದು ಇಬ್ಬರ ನಡುವಿನ ಸಮಸ್ಯೆಗಳು ಉಲ್ಬಣವಾಗುತ್ತಿರುವುದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ದಿನಪತ್ರಿಕೆಗಳಲ್ಲಿ ಮಾತ್ರವಲ್ಲ ಪ್ರತ್ಯಕ್ಷವಾಗಿಯೂ ವೃದ್ಧರ ಬವಣೆ ಅನುಭವಕ್ಕೆ ಬರುತ್ತಿದೆ. ಆಸ್ತಿಯ ಒಡೆತನಕ್ಕಾಗಿ ಅಥವ ನಗರಗಳಲ್ಲಿ ಮನೆ ಚಿಕ್ಕದು; ಜಾಗ ಸಾಕಾಗದು, ಮಹಡಿ ಮೇಲಿರುವ ಮನೆಗೆ ಮೆಟ್ಟಲು ಹತ್ತಿ ಇಳಿಯಲು ಆಗದು, ಮನೆಯಲ್ಲಿ ಎಲ್ಲರು ಕೆಲಸಕ್ಕೆ ಹೋದಮೇಲೆ ಕಾಡುವ ಖಿನ್ನತೆ, ಒಂಟಿತನದ ಬೇಸರ ನೀಗಲು, ಎಂಬ ಕಾರಣಗಳನ್ನು ಮುಂದೊಡ್ಡಿ ವಯಸ್ಸಾದ ತಂದೆತಾಯಿಯರನ್ನು ನಿಭಾಯಿಸಲಾರದೆ ವೃದ್ಧಾಶ್ರಮಕ್ಕೆ ಸೇರಿಸುತ್ತಿರುವ ಮಕ್ಕಳು, ಮಕ್ಕಳು–ಮೊಮ್ಮಕ್ಕಳು–ಸೊಸೆ–ಅಳಿಯಂದಿರ ಜತೆಗೆ ಹೊಂದಿಕೊಳ್ಳಲಾರದ ವೃದ್ಧ ತಾಯಿತಂದೆಯರು, ತಾವಾಗಿಯೆ ತಂದು-ಕೊಂಡ ಒಂಟಿತನದ ಅಪಾಯಗಳಿಗೆ ಬಲಿಯಾಗುತ್ತಿರುವ ವೃದ್ಧರು–ಹೀಗೆ ನಾನಾ ರೀತಿಯ ವೃದ್ಧರ ಬವಣೆಗಳನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. ಮೊದಲು ಸಂಜೆಯಾದರೆ ಪ್ರವಚನ, ಹರಿಕಥೆ, ದೇವಸ್ಥಾನ, ಮಠ ಎಂದು ಭೇಟಿ ಕೊಡುವ ಮೂಲಕ ಸಮಾನ ಮನಸ್ಕರ ಒಡನಾಟ ವೃದ್ಧರಿಗೆ ಮುದ ನೀಡುತ್ತಿತ್ತು; ಅಂಥ ಕ್ಷಣಗಳು ಅವರ ಪಾಲಿಗೆ ಚೇತೋಹಾರಿಯಾಗಿದ್ದವು. ಆದರೆ ಈಗಿನ ಮಿತಿಮೀರಿದ ವಾಹನ ದಟ್ಟಣೆ ರಸ್ತೆಗಳಲ್ಲಿ ಸಬಲರಿಗೆ ಓಡಾಡಲು ಕಡುಕಷ್ಟವಾಗಿರುವಾಗ ವೃದ್ಧರ ಪಾಡು ಹೇಳ ತೀರದು. ಸರಕಾರ ವೃದ್ಧರಿಗೆ ಸಾಧ್ಯವಾದಷ್ಟು ಹುಲ್ಲುಕಡ್ಡಿಯ ನೆರವು ನೀಡಲು, ಸಮಸ್ಯೆಗಳಿಗೆ ಕಿಂಚಿತ್ ಪರಿಹಾರ ಒದಗಿಸಲು ಅವರನ್ನು ಹಿರಿಯ ನಾಗರೀಕರು ಎಂದು ಗುರುತಿಸಿ ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ಮಾಸಿಕ ವೇತನ, ಗುರುತಿನ ಚೀಟಿ, ಪ್ರಯಾಣಕ್ಕೆ ರಿಯಾಯಿತಿ ದರದಲ್ಲಿ ಟಿಕೆಟ್ಟು ಮುಂತಾದ ಸೌಲಭ್ಯಗಳನ್ನು ಕೊಟ್ಟಿರುವುದು ಶ್ಲಾಘನೀಯವಾಗಿದ್ದರೂ ವೃದ್ಧರ ಇಳಿಸಂಜೆಯ ಬದುಕು ಶೋಚನೀಯ ಎನ್ನದೆ ವಿಧಿಯಿಲ್ಲ.

ಈಗಿನ ವೈದ್ಯಕೀಯ ಸಮೀಕ್ಷೆ ಪ್ರಕಾರ ವೃದ್ಧಾಪ್ಯದಲ್ಲಿ ಕಾಡುವ ಕಾಯಿಲೆಗಳನ್ನು ಹೀಗೆ ಹೆಸರಿಸಿದ್ದಾರೆ: ಡಿಮೆಷ್ನಿಯಾ, ಪಾರ್ಕಿನ್ಸನ್, ಅಲ್ಸ್‌ಮೈರ್ ಎಂದು. ನರಗಳಲ್ಲಿ ಶಕ್ತಿಗುಂದಿ ಉಂಟಾಗುವ ಮೈನಡುಕ, ಮೆದುಳಿನಲ್ಲಿ ರಕ್ತ ಸಂಚಾರ ಕ್ಷೀಣಗೊಂಡ ಕಾರಣ ಉಂಟಾದ ಮರೆವು, ಜತೆಗೆ ಮಾನಸಿಕ ಹಿನ್ನೆಡೆ ಹಾಗೂ ಒತ್ತಡದಿಂದ ಬರುವ ಮಧುಮೇಹ, ರಕ್ತದೊತ್ತಡ, ಹೃದಯ ಬೇನೆ, ಕ್ಯಾನ್ಸರ್,ಅಸ್ತಮದ ಜತೆಗೆ ಕೀಲುನೋವು–ಹೀಗೆ ವೃದ್ಧರ ಶರೀರ ಅನೇಕ ರೋಗಗಳ ತವರು ಮನೆಯಾಗುತ್ತಿದೆ. ಅಲ್ಲದೆ ಮನೆಯ ಯಜಮಾನಿಕೆ ಮಾಡಿ ನಿವೃತ್ತರಾದ ವೃದ್ಧರಂತೂ ತಮ್ಮ ಕೈಲಾಗದಿದ್ದರೂ ಸುಮ್ಮನಿರಲೂ ಆಗದೆ ಮಕ್ಕಳು–ಸೊಸೆಯರೊಂದಿಗೆ ಅದೇ ದರ್ಪ ಪ್ರದರ್ಶಿಸಿ ಅಗೌರವಕ್ಕೆ ಪಾತ್ರರಾಗುತ್ತಿರುವುದು ಉಂಟು.

ವೃದ್ಧಾಪ್ಯದ ಬಗ್ಗೆ ಕೆಲವು ಕಹಿ ಅನುಭವೋಕ್ತಿಗಳು ಹೀಗಿವೆ:–

- ವೃದ್ಧರಾಗಲು ಯಾವುದೇ ಜಾಣ್ಮೆಯಾಗಲಿ, ಕಲೆಯಾಗಲಿ ಬೇಕಿಲ್ಲ; ಆದರೆ ಇದನ್ನು ತಾಳಿಕೊಳ್ಳುವುದಕ್ಕೆ ಚಾತುರ್ಯ ಬೇಕು–ಚಿಂತಕ ಗಯಟೆ
- ಹೆಚ್ಚು ಕಾಲ ಬದುಕಲು ವಯಸ್ಸಾಗುವುದೊಂದೆ ಲಭ್ಯವಿರುವ ಮಾರ್ಗ–ಚಿಂತಕ ಡೇನಿಯಲ್

ವಯಸ್ಸಾಗುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ; ಅದು ಬಿಡಿಸಲಾರದ ಅಸಾಧ್ಯ ಬಂಧನ-ಆಂಗ್ಲೋಕ್ತಿ.

ವೃದ್ಧಾಪ್ಯದ ನಿತ್ಯನರಕದಿಂದ ಪಾರಾಗಲು ಇರುವ ಏಕೈಕ ದಾರಿಯೆಂದರೆ ಮೊದಲಿಂದಲೇ ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂದು ಗುರು ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ಮೃತ್ಯು ಮುಟ್ಟದ ಮುನ್ನ ಪೂಜಿಸು ಲಿಂಗದೇವನ' ಎಂದು ಬೋಧಿಸುತ್ತಿರುವುದು. ಹೀಗೆ ಜೀವನದಲ್ಲಿ ವೃದ್ಧರಾಗುವ ಮೊದಲೇ ಎಚ್ಚೆತ್ತುಕೊಳ್ಳುವುದನ್ನು ನಾವು ಕಲಿತರೆ ಮಾತ್ರ ಮುಂಬರಲಿರುವ ವೃದ್ಧಾಪ್ಯವನ್ನು ಯಶಸ್ವಿಯಾಗಿ ಎದುರಿಸಬಲ್ಲೆವು.

ಇದೆಲ್ಲಾ ಹಿರಿತನದ ನೆಪದಲ್ಲಿ ವೃದ್ಧಾಪ್ಯದ ಮಾತಾಯಿತು. ಆದರೆ ನಿಜವಾದ ಹಿರಿತನದ ಬಗ್ಗೆ ನಮ್ಮ ವಚನಕಾರರು ಏನು ಹೇಳುತ್ತಿರಬಹುದು ಎಂಬುದನ್ನು ಈಗ ನೋಡೋಣ. ಗುರು ಬಸವಣ್ಣನವರು ತಮ್ಮ ವಚನದಲ್ಲಿ ಓದಿನ ಹಿರಿಯರು-ಇಲ್ಲಿ ಹಿರಿಯರು ಎಂದರೆ ದೊಡ್ಡವರು, ಹಿರಿಮೆ, ಶ್ರೇಷ್ಠ, ಒಡೆತನ ಎಂದೆಲ್ಲಾ ಅರ್ಥ ಬರುತ್ತದೆ. ಬದುಕಿರುವವರೆಗೂ ಜೀವನವೆಲ್ಲಾ ಅದು-ಇದು ಓದುವುದರಲ್ಲೆ ಕಾಲ ಹಾಕುವುದು; ತಮ್ಮ ಹೆಸರಿನ ಮುಂದೆ ಪಡೆದ ಬಿರುದು, ಗಳಿಸಿದ ಪದವಿಗಳ ಉದ್ದ ಪಟ್ಟಿಯನ್ನು ಸೇರಿಸಿಕೊಂಡು ಪ್ರದರ್ಶಿಸುವುದು. ತಮ್ಮ ಪ್ರೌಢಿಮೆ ಬಗ್ಗೆ ಹೆಮ್ಮೆ ಪಡುವುದು. ಮುಂದೆ ಹೇಳುತ್ತಾರೆ ವೇದದ ಹಿರಿಯರು, ಶಾಸ್ತ್ರದ ಹಿರಿಯರು, ಪುರಾಣದ ಹಿರಿಯರು- ನಾಲ್ಕು ವೇದಗಳನ್ನು ಚನ್ನಾಗಿ ಅಭ್ಯಾಸ ಮಾಡಿದವರಾಗಲಿ, ಆಳವಾಗಿ ಎಲ್ಲಾ ಶಾಸ್ತ್ರಗಳನ್ನು ಅಧ್ಯಯನ ಮಾಡಿ, ಪುರಾಣಗಳನ್ನು ಪಠಣ ಮಾಡಿದವರು ಆಗಿರಲಿ, ವೇಷದ ಹಿರಿಯರು- ಅಂದರೆ ತಾವು ಬೆಲೆ ಬಾಳುವ ವೇಷಭೂಷಣವನ್ನು ಧರಿಸಿ ತುಂಬಾ ದೊಡ್ಡ ಮನುಷ್ಯರು ಎಂದು ತೋರಿಸಿಕೊಂಡು ಓಡಾಡುವುದು, ಭಾಷೆಯ ಹಿರಿಯರು-ಹಲವು ಭಾಷೆಗಳನ್ನು ಕಲಿತು ಬಹುಭಾಷ ವಿಶಾರದ ಎಂಬ ಬಿರುದಾಂಕಿತರಾಗಿ ಅಹಂನಿಂದ ಬೀಗುವುದು- ಜನ ಇಂಥವರನ್ನು ಹಿರಿಯರು ಎಂದು ಭಾವಿಸಿ ಅವರು ಗಳಿಸಿದ ಪಾಂಡಿತ್ಯಕ್ಕೆ ತಲೆಬಾಗಿ ಗೌರವಿಸುತ್ತಾರೆ. ಇವರೆಲ್ಲಾ ತಮ್ಮ ವೈಯಕ್ತಿಕ ಸಾಧನೆಗಳ ಬಲದಿಂದ ಜ್ಞಾನಿಗಳು, ಬುದ್ಧಿವಂತರು, ಹಿರಿಯರೆನಿಸಿಕೊಂಡು ಮೆರೆದರೂ ಇವರಾರಿಗೂ ತಮ್ಮನ್ನು; ಈ ಜಗತ್ತನ್ನು ಸೃಷ್ಟಿಮಾಡಿದ ಪರಮಾತ್ಮನ ನಿಜಸ್ವರೂಪ, ಅಸ್ತಿತ್ವವನ್ನು ಜಗತ್ತಿಗೆ ಸಾರಬೇಕೆಂಬ, ಅವನ ನಿರಾಕಾರ, ನಿರವಯವ ಅಸ್ತಿತ್ವವನ್ನು ಮೆರೆಸಿ, ದೇವರ ಬಗೆಗಿರುವ ಅಜ್ಞಾನವನ್ನು ತೊಡೆಯಬೇಕೆಂದು ಅನಿಸಲಿಲ್ಲ. ತಮ್ಮ ಸಾಧನೆಯ ಯಶಸ್ಸನ್ನು ಪರಮಾತ್ಮನ ಜ್ಞಾನ ಪ್ರಸಾರಕ್ಕೆ ಬಳಸಲಿಲ್ಲ. ತಮ್ಮ ವೈಯಕ್ತಿಕ ಆನಂದ ಸುಖ ಸಂತೋಷಕ್ಕಾಗಿ ಬದುಕುವ ಇವರಿಗೆ ಪರಮಾತ್ಮನ ಅನುಗ್ರಹ ಪ್ರಾಪ್ತಿಯಾಗುವುದಿಲ್ಲ ಮಾತ್ರವಲ್ಲ ದೇವನ ಕರುಣೆಗೆ ಪಾತ್ರವಾಗದ ಜ್ಞಾನ, ಸಾಧನೆ, ಕೀರ್ತಿ ಎಲ್ಲವೂ ವ್ಯರ್ಥ ಎಂದು ಗುರು ಬಸವಣ್ಣನವರು ತಮ್ಮ ಕೀರ್ತಿವಾರ್ತೆಗಾಗಿ ಗಳಿಸಿದ ಹಿರಿತನವನ್ನು ಜರಿದಿದ್ದಾರೆ.

ದೊಡ್ಡ ದೊಡ್ಡ ಶೆಟ್ಟಿಗಳ ಕಂಡು
ಅಡ್ಡಗಟ್ಟಿ ಹೋಗಿ, ಶರಣಾರ್ಥಿ ಎಂಬ
ಎಡ್ಡುಗಳ್ಳತನಕ್ಕೆ ತಮ್ಮಮಠಕ್ಕೆ ಬನ್ನಿ ಹಿರಿಯರೇ
ಎಂಬರು. ಹೋಗಿ ಶರಣಾರ್ಥಿ ಭಕ್ತನೆಂದೊಡೆ
ಕೇಳದ ಹಾಗೆ ಅಡ್ಡ ಮೋರೆಯನಿಕ್ಕಿಕೊಂಡು
ಸುಮ್ಮನೆ ಹೋಗುವ ಹೆಡ್ಡ ಮೂಳರಿಗೆ ದುಡ್ಡೇ
ಪ್ರಾಣವಾಯಿತ್ತು. ದುಡ್ಡಿಸ್ತರ ಕುರುಹನರಿಯದೆ
ಮೊಳಪಾದದ ಮೇಲೆ ಹೊಡಹೊಡಕೊಂಡು
ನಗುತಿರ್ದಾತ ನಮ್ಮ ಅಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯನವರು ಲೌಕಿಕ ಜನರ ದೃಷ್ಟಿಯಲ್ಲಿ ಕಂಡುಬರುವ ಹಿರಿಯರ ವರ್ತನೆಯ ಬಗ್ಗೆ ಈ ವಚನದಲ್ಲಿ ಪ್ರತಿಪಾದಿಸಿದ್ದಾರೆ. ಧನ ಸಂಪಾದನೆಯನ್ನೆ ಜೀವನದ ಪ್ರಮುಖ ಗುರಿಯಾಗಿಸಿಕೊಂಡ ದೊಡ್ಡ ವ್ಯಾಪಾರಿಗಳನ್ನು ದಾರಿಯಲ್ಲಿ ಅಡ್ಡಗಟ್ಟಿ ಮನೆಗೆ ಆಹ್ವಾನಿಸಿ ಸತ್ಕರಿಸಬೇಕೆಂಬ ಅಪೇಕ್ಷೆಯಿಂದ ಕೈಮುಗಿದು ಶರಣಾರ್ಥಿ ಎಂದು ಬಿನ್ನವಿಸಿದಾಗ ಅಂಥ ಸಿರಿವಂತರು ಭಕ್ತನ ಈ ಆಹ್ವಾನವನ್ನು ಕಂಡು ಕಾಣದಂತೆ, ಕೇಳಿಯೂ ಕೇಳದಂತೆ ಮುಖ ತಿರುಗಿಸಿಕೊಂಡು ಹೋಗುವವರಿಗೆ ಬಡಭಕ್ತರ ಉಪಚಾರಕ್ಕಿಂತಲೂ ದುಡ್ಡೇ ದೊಡ್ಡದಾಯಿತು ಎಂದು ಅಂಬಿಗರ ಚೌಡಯ್ಯನವರು ಧನಮದದಿಂದ ಕೂಡಿದ ಹಿರಿಯರನ್ನು ಅರ್ಥ ಮಾಡಿಕೊಳ್ಳದ ಮೂರ್ಖರನ್ನು ಕಂಡು ಪರಮಾತ್ಮನು ನಗುತ್ತಿದ್ದಾನೆಂದು ವಿಡಂಬಿಸುತ್ತಿದ್ದಾರೆ. ಇಂಥ ಒಣ ಪ್ರತಿಷ್ಠೆ-ದೊಡ್ಡಸ್ತಿಕೆಯ ಅಹಂ ಹೊಂದಿದ ಹಿರಿಯರನ್ನು ಅಂಬಿಗರ ಚೌಡಯ್ಯನವರು ನಿರ್ದಾಕ್ಷಿಣ್ಯವಾಗಿ ಬಹಿಷ್ಕರಿಸಿದ್ದಾರೆ. ಇನ್ನು ಕೆಲವು ಹಿರಿಯಜನರುಂಟು. ಅಂಥವರನ್ನು ಶರಣೆ ಅಕ್ಕಮ್ಮತಾಯಿ ತಮ್ಮ ವಚನದಲ್ಲಿ ಈ ರೀತಿ ವಿಡಂಬಿಸುತ್ತಿರುವುದನ್ನು ಕಾಣಬಹುದು.

ಹೋತಿನ ಗಡ್ಡದಂತೆ ಗಡ್ಡದ ಹಿರಿಯರ
ನೋಡಾ.ಬಿಡಾರ ಬಿಡಾರವೆಂದು
ಹಿರಿಯತನಕ್ಕೆ ಅಹಂಕರಿಸಿ.
ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ,
ಭಕ್ತರೊಳು ಕ್ರೋಧ, ಭ್ರಷ್ಟರೊಳು ಮೇಳ
ಇವರು ನರಕಕ್ಕೆ ಯೋಗ್ಯರು, ಆಚಾರವೆ
ಪ್ರಾಣವಾದ ರಾಮೇಶ್ವರಲಿಂಗದಲ್ಲಿ.
-ಶರಣೆ ಅಕ್ಕಮ್ಮತಾಯಿ

ತಮ್ಮಲ್ಲಿ ಯಾವ ಅರ್ಹತೆಯಿಲ್ಲದಿದ್ದರೂ ವಯೋಧರ್ಮಕ್ಕನುಗುಣವಾಗಿ ಮುಖದಲ್ಲಿ ಹೋತ(ಗಂಡು ಮೇಕೆ)ದಂತೆ ಉದ್ದದ ಬಿಳಿಗಡ್ಡ ಬೆಳೆದ ಮಾತ್ರಕ್ಕೆ ತಾವು ಎಲ್ಲರಿಗಿಂತ ದೊಡ್ಡವರು, ಶ್ರೇಷ್ಠರು ಎಂದು ಭ್ರಮಿಸಿಕೊಂಡು ಹೋದ ಕಡೆಯಲೆಲ್ಲ ತಮಗೆ ಸರಿಯಾದ ಅಂದರೆ ವಿಐಪಿ ಉಪಚಾರ ಸಿಗಬೇಕೆಂದು ಆಗ್ರಹಿಸುವವರು, ತಮ್ಮ ನಿರೀಕ್ಷೆಗೆ ತಕ್ಕಂತೆ ವ್ಯವಸ್ಥೆಯಾಗದಿದ್ದರೆ ಸೇವಾ ಸಿಬ್ಬಂದಿಯನ್ನು ದೂಷಿಸುತ್ತಾ, ಮೇಲಾಧಿಕಾರಿಗಳು ಗೊತ್ತು ಎಂದು ಹೆದರಿಸುತ್ತಾ ಉಪಚಾರವನ್ನು ಪಡೆಯಲು ಹವಣಿಸುವುದು. ಸದಾಚಾರ ಸಂಪನ್ನರಲ್ಲದ ಅನಾಚಾರವೇ ತುಂಬಿ ತುಳುಕಾಡುವ ಇಂಥ ಹಿರಿಯರಿಗೆ ಭಕ್ತರನ್ನು, ಶರಣರನ್ನು ಕಂಡರೆ ಬಹಳ ಕೋಪವಂತೆ ; ಆದರೆ ಭ್ರಷ್ಟರು, ವಂಚಕರು, ಮೋಸಗಾರರನ್ನು ಕಂಡರೆ ಇಷ್ಟಪಟ್ಟು ಅವರ ಸಂಗದಲ್ಲಿ ಸೇರುವ ಇವರಿಗೆ ನರಕವೇ ಗತಿ ಎಂದು ಶರಣೆ ಅಕ್ಕಮ್ಮತಾಯಿಯವರು ತಮ್ಮ ಅಭಿಮತವನ್ನು ಈ ವಚನದಲ್ಲಿ ಹೊರಗೆಡಹಿದ್ದಾರೆ.

ಇದುವರೆಗೂ ಹಿರಿತನದ ಹೆಸರಿನಲ್ಲಿ ತಮ್ಮ ಪ್ರತಿಷ್ಠೆ ಮೆರೆಯುವವರನ್ನು ನಮಗೆ ಶರಣರು ತೋರಿಸಿದರು. ಇನ್ನು ಮುಂದೆ ನಿಜವಾದ ಹಿರಿಯತನದ ವ್ಯಾಖ್ಯಾನವನ್ನು ಮತ್ತು ಆದರ್ಶ ವ್ಯಕ್ತಿತ್ವದ ಪರಿಚಯವನ್ನು ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಂದ ತಿಳಿಯೋಣ.

ಅಜಕೋಟಿ ಕಲ್ಪ ವರುಷದವರೆಲ್ಲರು
ಹಿರಿಯರೆ? ಹುತ್ತೇರಿ ಬೆತ್ತ ಬೆಳೆದ
ತಪಸ್ವಿಗಳೆಲ್ಲರು ಹಿರಿಯರೆ ? ನಡುಮುರಿದು
ಗುಡುಗೂರಿ ತಲೆ ನಡುಗಿ ನೆರೆತೆರೆ
ಹೆಚ್ಚಿ, ಮತಿಗೆಟ್ಟು ಒಂದನಾಡ ಹೋಗಿ
ಒಂಬತ್ತನಾಡುವ ಅಜ್ಞಾನಿಗಳೆಲ್ಲರು ಹಿರಿಯರೆ?
ಅನುವನರಿದು, ಘನವ ಬೆರಸಿ
ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ
ಹಿರಿಯತನ ಮಹಾದೇವಿಯಕ್ಕಂಗಾಯಿತ್ತು.

ಬ್ರಹ್ಮಾಂಡ ಸೃಷ್ಟಿಯಾಗುವ ಮೊದಲೆ ಹುಟ್ಟಿದ್ದೇವೆ ಎಂದು ಹೇಳಿಕೊಳ್ಳುವವರು ಹಿರಿಯರೆ? ಅಲ್ಲ, ತನ್ನ ಸುತ್ತ ಹುತ್ತ ಬೆಳೆಸಿಕೊಂಡು ತಪಸ್ಸು ಮಾಡಿದವರನ್ನು ಹಿರಿಯರು ಎನ್ನಬಹುದೇ? ಸಾಧ್ಯವಿಲ್ಲ. ಇನ್ನು ನೂರಾರು ವರ್ಷ ಬದುಕು ಬಾಳಿ ನಡು ಮುರಿದು, ಶರೀರ ಗೂಡಾಗಿ, ತಲೆ ನಡುಗುತ್ತಾ, ಚರ್ಮ ಸುಕ್ಕುಗಟ್ಟಿ, ಬುದ್ಧಿಭ್ರಮಣೆಯಾಗಿ ಒಂದು ಮಾತಿಗೆ ಹತ್ತು ಮಾತಾಡುವ ಅಜ್ಞಾನಿ ಮುದುಕರನ್ನು ಹಿರಿಯರು ಎಂದು ಕರೆಯಬೇಕೇ?

ಖಂಡಿತಾ ಆಗದು. ಹಾಗಾದರೆ ಹಿರಿಯರು ಯಾರು ?! ನಾನು-ಜಗತ್ತು-ಈಶ್ವರನ ಸಂಬಂಧದ ಮರ್ಮವನ್ನರಿತು, ಅಂಥ ಮಹಾಘನದೊಳಗೆ ಬೆರೆದು, ಜ್ಞಾನಿಗಳಲ್ಲಿ ಹಿರಿದು-ಕಿರಿದು ಎಂಬ ಭೇದವನ್ನು ಮಾಡದ ಪರಮಾತ್ಮನಲ್ಲಿ ಒಂದಾಗಿ ಬೇರಾಗದ ಹಿರಿತನ ನಮ್ಮ ಮಹಾದೇವಿಯಕ್ಕನವರದು ಎಂದು ನಿಜಹಿರಿತನದ ಪ್ರತ್ಯಕ್ಷರೂಪವನ್ನು ಮುಂದಿಡುತ್ತಿದ್ದಾರೆ. ಹಿರಿತನ ಹಣ ಗಳಿಕೆಯಲ್ಲಾಗಲಿ, ವಯಸ್ಸಿನಲ್ಲಿ ಆಗಲಿ ಇಲ್ಲ ಎಂಬುದನ್ನು ಮನಗಾಣಿಸಿ ನಿಜಹಿರಿತನದ ಸಾಕ್ಷಾತ್ಕಾರ ಮಾಡಿಸಿದ 'ಕಿರಿಯರಾದಡೇನು? ಹಿರಿಯರಾದಡೇನು ?ಅರಿವಿಂಗೆ ಹಿರಿದು ಕಿರಿದುಂಟೆ ? ಗುಹೇಶ್ವರಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದು ಕಾಣಬಂದಿತ್ತು' ಎಂದು ಶೂನ್ಯಪೀಠಾಧೀಶ ಅಲ್ಲಮ ಪ್ರಭುದೇವರಿಂದ ಸ್ತುತಿಸಿಕೊಂಡ ಚನ್ನಬಸವಣ್ಣನವರಿಗೆ ನಮಿಸೋಣ.

ಆಚಾರ ಅರಿವು ಅನುಭಾವ


ಮನಸ್ಸಿನ ಮಹತ್ವ



*ಪೂಜ್ಯಶ್ರೀ ಬಸವಪ್ರಭು ಸ್ವಾಮೀಜಿ.

ಮನಸ್ಸು ಬಹಳ ಮಹತ್ವದ್ದು, ಭೂಮಿಯ ಮೇಲೆ ಮನುಷ್ಯನಂತಹ ಬುದ್ಧಿಜೀವಿ ಬೇರೆ ಯಾವುದೂ ಇಲ್ಲ. ಮನುಷ್ಯನ ಒಳಗಿನ ಮನಸ್ಸಿನಷ್ಟು ಬೇರೆ ಮಹತ್ವದ್ದಿಲ್ಲ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಇವು ಹತೋಟಿಯಲ್ಲಿದ್ದು ನೂರು ವರ್ಷ ಜೀವನ ಅನುಭವಿಸಬೇಕಾಗಿದ್ದರೆ ಮನಸ್ಸೇ ಕಾರಣ. ಗಣಿತದಲ್ಲಿ ಶೂನ್ಯವೆ (0) ಇಲ್ಲವಾದರೆ ಗಣಿತದ ಲೆಕ್ಕಾಚಾರವೇ ಇಲ್ಲವಾಗುತ್ತದೆಯೋ ಹಾಗೆಯೇ ಮಾನವನಲ್ಲಿ ಮನಸ್ಸು ಇಲ್ಲದಿದ್ದರೆ ಏನನ್ನೂ ಸಾಧಿಸಲಾಗದು. ಮನಸ್ಸು ಏನೆಲ್ಲ ಮಾಡುವುದು; ಒಬ್ಬ ಡಾಕ್ಟರನ್ನಾಗಿ, ಇಂಜಿನೀಯರನ್ನಾಗಿ ಮಾಡಬಲ್ಲದು. ಒಬ್ಬ ಭೋಗಿಯನ್ನಾಗಿಯೂ, ತ್ಯಾಗಿಯನ್ನಾಗಿಯೂ ಮಾಡಬಲ್ಲದು. ಸುಖ-ದುಃಖ, ನೋವು, ನಲಿವು, ಏನೆಲ್ಲ ಮಾಡುವುದು ಮನಸ್ಸೆ. ಇಂತಹ ಶ್ರೇಷ್ಠ ಮನಸ್ಸನ್ನು ದೇವನು ನಿಸರ್ಗದತ್ತವಾಗಿ ಮಾನವನಿಗೆ ನೀಡಿದ್ದಾನೆಯಲ್ಲವೆ?.

ಒಬ್ಬ ತತ್ವಜ್ಞಾನಿ ಹೇಳುತ್ತಾನೆ, "ಸುಂದರ ಆಲೋಚನೆಯಿಂದ ಈ ಮನಸ್ಸು ಸುಂದರ ಬದುಕನ್ನು ಕಟ್ಟುತ್ತದೆ". ಈ ಮನಸ್ಸು ನಾವು ಹೇಗೆ ಬಳಸಿಕೊಳ್ಳುತ್ತೇವೆಯೋ ಹಾಗೆ, 'ಬಂಧನಕ್ಕೂ ಕಾರಣ ಮೋಕ್ಷಕ್ಕೂ ಕಾರಣವಾಗುತ್ತದೆ. ಜಗತ್ತು ಕೆಟ್ಟ ಅಂತ ತಿಳಿದುಕೊಂಡರೆ ಅವನು ಕೆಟ್ಟ ರೀತಿಯಿಂದಲೇ ನೋಡುತ್ತಿರುತ್ತಾನೆ. ಅದ್ಭುತ ಎಂದು ತಿಳಿದುಕೊಂಡರೆ ಅದ್ಭುತವಾಗಿ ಕಾಣಿಸುತ್ತದೆ.



ಮಾಲೆ ಸುಂದರವಾಗಿ ಕಾಣಬೇಕಾದರೆ ಹೂ ಬೇಕು. ಮನೆ ಸುಂದರವಾಗಿ ಕಟ್ಟಿದ್ದಾರೆ ಎಂದರೆ ಆ ಮನೆಗೆ ಲೇಪಿಸಿದ ಬಣ್ಣ, ಮನೆಯೊಳಗಿನ ವಸ್ತುಗಳು, ಮನೆ ಮುಂದಿನ ನೈಸರ್ಗಿಕ ಕೈತೋಟ ಅದಕ್ಕೆ ತಕ್ಕಂತೆ ಇದ್ದಾಗ ಮಾತ್ರ ಅಂತಹ ಮನೆಯು ಸುಂದರವಾಗಿ ಕಾಣುತ್ತದೆ.

ಹಾಗೆಯೇ ಭಾವನೆಗಳು ಸುಂದರವಾಗಿ ಅರಳಬೇಕಾದರೆ ಅಲ್ಲಿ ಮನಸ್ಸು ಕಾರಣವಾಗುತ್ತದೆ. 'ಯದ್ಭಾವಂ ತದ್ಭವತಿ' ಎನ್ನುವಂತೆ ಈ ಮನಸ್ಸನ್ನು ಹೇಗೆ ಬಳಸಿಕೊಳ್ಳಬೇಕೆಂಬುದು ನಮ್ಮ ಕೈಯಲ್ಲಿದೆ. ನಮ್ಮ ಮನಸ್ಸಿಗೆ ನಾವೇ ಕಾರಣರು ಒಂದಿಷ್ಟು ಮಹಾನುಭಾವರಿಂದ, ಜ್ಞಾನಿಗಳಿಂದ ತಿಳಿದುಕೊಳ್ಳುವುದು ಬಹಳವಿದೆ. ತಿಳಿದುಕೊಂಡಂತಹ, ಬುದ್ಧ, ಮಹಾವೀರ, ಕಪೀಲ, ಗುರು ಬಸವಣ್ಣನವರು, ಶರಣರು, ಸಂತರು ತಮ್ಮ ಮನಸ್ಸಿನಿಂದ ಈ ಭಾರತ ದೇಶವನ್ನು ಶ್ರೀಮಂತಗೊಳಿಸಿದರು. ಆಧ್ಯಾತ್ಮದ ತಾಣವನ್ನಾಗಿ ಮಾಡಿದರು. ಈ ತೋರುವ ಜಗತ್ತು ಚಿತ್-ವಿಲಾಸ. ಇಂತಹ ಜಗತ್ತಿಗೆ ಬೆಲೆ ಕಟ್ಟುವುದು ಈ ಮನಸ್ಸು. ಇದು ಒಂದು ರೀತಿ ಚಾಕು ಇದ್ದ ಹಾಗೆ. ಇತಂಹ ಚಾಕುವನ್ನು ಯಾವುದಕ್ಕಾದರೂ ಬಳಸಬಹುದು. ತರಕಾರಿ, ಹಣ್ಣು ಹಂಪಲನ್ನು ಹಚ್ಚಲುಬಹುದು. ಇನ್ನೊಬ್ಬರನ್ನು ಕೊಲೆ ಮಾಡಲೂಬಹುದು. ಆದರೆ ಬಳಸುವ ವ್ಯಕ್ತಿಯ ಸದ್ಗುಣ, ದುರ್ಗಣಕ್ಕೆ ಸಂಬಂಧಿಸಿದ್ದಾಗಿದೆ.

ಅದೇ ರೀತಿ ತಂಬೂರಿ ಇದ್ದ ಹಾಗೆ. ಸುಗಮಸಂಗೀತ, ಒಳ್ಳೆಯ ಭಕ್ತಿಗೀತೆ ಹಾಡಬಹುದು, ಕೆಟ್ಟ ಆಶ್ಲೀಲ ಪದವನ್ನೂ ಹಾಡಬಹುದು, ಇಂಥಹ ಮನಸ್ಸನ್ನು ನಾವು ಸ್ವಲ್ಪ ಸ್ವಚ್ಛ ಮಾಡಬೇಕು. ಒಂದು ಹೊಲದಲ್ಲಿ ಕಸ, ಹುಲ್ಲು, ಮುಳ್ಳು ಕಂಟಿ ಬೆಳೆದಿದೆ ಎಂದರೆ ಅಲ್ಲಿ ನಾವು ಏನನ್ನೂ ಬಿತ್ತಿ ಬೆಳೆಯಲು ಸಾಧ್ಯವಿಲ್ಲ. ಹಾಗೆಯೇ ಈ ಮನಸ್ಸಿನಲ್ಲಿ ಎಲ್ಲಿಯವರೆಗೆ ಅಸಹ್ಯ-ಹೊಟ್ಟೆಕಿಚ್ಚು, ಹಿಂಸೆ, ವಂಚನೆ ಎಂಬ ದುರ್ಗುಣದ ಕಸ ಬೆಳೆದಿವೆಯೋ

> **ಅಸೂಯೆ ಎನ್ನುವುದು ಕೂಡ ಒಂದು ತರಹದ ಆಟ ಇದ್ದ ಹಾಗೆಯಲ್ಲವೆ? ಬೆಂಕಿಯು ಒಂದು ಕಡೆ ಬೂದಿ ಮುಚ್ಚಿದ ಕೆಂಡದಂತೆ, ಇನ್ನೊಂದು ಕಡೆ ಹೊತ್ತಿ ಉರಿಯುವಂತೆ, ಕೆಲವರ ಮನಸ್ಸು ಬೂದಿ ಮುಚ್ಚಿದ ಕೆಂಡದಂತೆ, ಇನ್ನು ಕೆಲವರ ಮನಸ್ಸು ಹೊತ್ತಿ ಉರಿಯುವ ಅಗ್ನಿಯಂತೆ ಕಾರ್ಯ ಮಾಡುತ್ತದೆ.**

ಅಲ್ಲಿಯವರೆಗೆ ಮನಸ್ಸಿನಲ್ಲಿ ಸದ್ಭಾವನೆಯನ್ನು ಬೆಳೆಯಲು ಸಾಧ್ಯವಿಲ್ಲ. ಇಂತಹ ಮನಸ್ಸಿನಲ್ಲಿ ದೇವನಿರಲು ಹೇಗೆ ಸಾಧ್ಯ? ಅದಕ್ಕೆ ಗುರುಬಸವಣ್ಣನವರು ಹೇಳುತ್ತಾರೆ:

**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ
ರಜ ತುಂಬಿ ಮನೆಯೊಳಗೆ
ಮನೆಯೊಡೆಯನಿದ್ದಾನೊ ಇಲ್ಲವೋ ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ
ವಿಷಯ ತುಂಬಿ, ಮನೆಯೊಳಗೆ
ಮನೆಯೊಡಯನಿಲ್ಲ ಲಿಂಗದೇವಾ**

(101)

ಇಂತಹ ಮನಸ್ಸೆಂಬ ಮನೆಯೊಳಗೆ ಸ್ವಚ್ಛಂದದ ಪೈರು ಬರಲು ಹೇಗೆ ಸಾಧ್ಯ? ಅದಕ್ಕೆ ಇವನ್ನು ಸ್ವಚ್ಛ ಮಾಡಬೇಕಲ್ಲ, ಅದಕ್ಕಾಗಿ ಏನು ಮಾಡುವುದು? ಅದೇ ಪ್ರಶ್ನೆ. ಈ ಬಗ್ಗೆ ಷಣ್ಮುಖ ಶಿವಯೋಗಿಗಳ ವಚನದಲ್ಲಿ ನಾವು ಕಂಡುಕೊಳ್ಳಬಹುದು.

**ಮನವೆಂಬ ಮರ್ಕಟನು ತನುವೆಂಬ
ವೃಕ್ಷವನ್ನೇರಿ,
ಇಂದ್ರಿಯವೆಂಬ ಶಾಖೆ ಶಾಖೆಗೆ ಹಾರಿ,
ಭವದತ್ತ ಮುಖ ಮಾಡಿ ಹರಿಯುತ್ತಿದೆ
ನೋಡಾ ಇಂತಹ ಮನವೆಂಬ ಮರ್ಕಟನ
ನಿಮ್ಮ ನೆನಹು ಎಂಬ ಪಾಶದಲ್ಲಿ ಕಟ್ಟಿ ಎನ್ನ
ಉಳುಹಿಕೊಳ್ಳಾ ಅಖಂಡೇಶ್ವರಾ.**

ಎನ್ನುವ ವಚನ ಎಷ್ಟು ಅರ್ಥಗರ್ಭಿತವಲ್ಲವೇ? ಅದಕ್ಕೆ ಜೀವನದಲ್ಲಿ ಹೊಂದಾಣಿಕೆ ಇರಬೇಕು. ಕಾಯಕ, ಜ್ಞಾನ, ನೆನಹು, ಅನುಭಾವ, ಅರ್ಪಣೆ, ದಾಸೋಹ ಸೇವೆ ವಿಶ್ರಾಂತಿ ಇದ್ದಾಗ ಮಾತ್ರ ಮನಸ್ಸು ಸ್ವಚ್ಛಂದವಾಗುತ್ತದೆ. ಹಾಗಂತ ಹೇಳಿ ಒಂದೊಂದೆ ಕೆಲಸ ಇಪ್ಪತ್ತನಾಲ್ಕು ಗಂಟೆ ಮಾಡುವುದಲ್ಲ, ಇಪ್ಪತ್ತನಾಲ್ಕು ಗಂಟೆಯೊಳಗೆ ಎಲ್ಲವನ್ನೂ ಮಾಡಬೇಕೆನ್ನುತ್ತಾರೆ.

"ನೂರನೋದಿ ನೂರ ಕೇಳಿದರೇನು? ಆಶೆ ಹರಿಯದು ರೋಷ ಬಿಡದು" ಎನ್ನುವಂತೆ ಅಸೂಯೆಯು (ಹೊಟ್ಟೆಕಿಚ್ಚು) ಜೀವನದ ಸೊಬಗನ್ನು ನಾಶ ಮಾಡುತ್ತದೆ. ನನ್ನ ಹತ್ತಿರ ಇಲ್ಲದ್ದು ಇನ್ನೊಬ್ಬರ ಹತ್ತಿರ ಇತ್ತು ಅಂದರೆ ಹೊಟ್ಟೆಕಿಚ್ಚು ಪ್ರಾರಂಭವಾಗುತ್ತದೆ. ತಾಪ ಶುರುವಾಗುತ್ತದೆ. ನನ್ನ ಹತ್ತಿರ ಇತ್ತು ಅವನ ಹತ್ತಿರವು ಇತ್ತು ಅಂದರೂ ಹೊಟ್ಟೆ ಕಿಚ್ಚು ಸುಮ್ಮನೆ ಕೂಡುವುದಿಲ್ಲ. ತನ್ನ ಕೆಲಸ ಪ್ರಾರಂಭ ಮಾಡುತ್ತದೆ. ಅದಕ್ಕೆ ಹಳ್ಳಿಗರು ಬಹಳ ಚೆನ್ನಾಗಿ ಹೆಸರು ಕೊಟ್ಟಿದ್ದಾರೆ **"ಹೊಟ್ಟೆಕಿಚ್ಚು"** ಎಂದು. ಇದು ಹೊಟ್ಟೆ ಯೊಳಗಿನ ಕಿಚ್ಚು ಅಂದರೆ ಉರಿತಾಪ. ಇದು ನಮ್ಮ ಶರೀರವನ್ನು ಅದರೊಳಗಿರುವ ಮನಸ್ಸನ್ನು ಸುಡುತ್ತದೆ ಹೊರತು ಇನ್ನೊಬ್ಬರನ್ನಲ್ಲ. ಅದಕ್ಕೆ ಗುರು ಬಸವಣ್ಣನವರು ಹೀಗೆ ಹೇಳುತ್ತಾರೆ.


**"ತನುವಿನ ಕೋಪ ತನ್ನ ಹಿರಿತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು
ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡುವುದೆ?..**

ಇದು ಸ್ಪರ್ಧಾಜಗತ್ತು. ಉದಾಹರಣೆಗೆ ಒಬ್ಬರು ಓಡುತ್ತಿದ್ದರೆ ಇನ್ನೊಬ್ಬರು ಅವರಿಗಿಂತ ಮುಂದೋಡಬೇಕೆನ್ನುತ್ತಾರೆ. ಒಬ್ಬರು ಮನೆ ಕಟ್ಟಿದರೆ ಇನ್ನೊಬ್ಬರು ಸಾಲಮಾಡಿಯಾದರೂ ಚಿಂತೆಯಿಲ್ಲ, ನಾನು ಅವರಿಗಿಂತ ಚೆನ್ನಾಗಿ ಕಟ್ಟಬೇಕೆಂಬ ಆಕಾಂಕ್ಷೆ ಇಟ್ಟುಕೊಂಡಿರುತ್ತಾರೆ. ಒಬ್ಬರು ಕಾರು ತಂದರೆ, ನಾನೂ ತರಬೇಕು. ಟಿವಿ ತಂದರೆ ನಾನೂ ತರಬೇಕು. ಈ ರೀತಿಯಾಗಿ ಪೈಪೋಟಿ ನಡೆದಿರುತ್ತದೆ. ಒಬ್ಬರು ಸಾಧನೆಯಲ್ಲಿ ಮುಂದಿದ್ದರೆ ಅವರ ಕಾಲನ್ನು ಹಿಡಿದೆಳೆಯಲು ತವಕಿಸುತ್ತಿರುತ್ತಾರೆ; ಇದೆ ಹೊಟ್ಟೆ ಕಿಚ್ಚು. ಅಂದರೆ ಸೇರಲಾರದ್ದು ಎಂದರ್ಥ.

ಅಸೂಯೆ ಎನ್ನುವುದು ಕೂಡ ಒಂದು ತರಹದ ಆಟ ಇದ್ದ ಹಾಗೆಯಲ್ಲವೆ? ಬೆಂಕಿಯು ಒಂದು ಕಡೆ ಬೂದಿ ಮುಚ್ಚಿದ ಕೆಂಡದಂತೆ, ಇನ್ನೊಂದು ಕಡೆ ಹೊತ್ತಿ ಉರಿಯುವಂತೆ, ಕೆಲವರ ಮನಸ್ಸು ಬೂದಿ ಮುಚ್ಚಿದ ಕೆಂಡದಂತೆ, ಇನ್ನು ಕೆಲವರ ಮನಸ್ಸು ಹೊತ್ತಿ ಉರಿಯುವ ಅಗ್ನಿಯಂತೆ ಕಾರ್ಯ ಮಾಡುತ್ತದೆ.

"ಲಿಂಗ ಮಧ್ಯೆ ಜಗತ್ ಸರ್ವಂ" ಎನ್ನುವ ಹಾಗೆಯೇ **ಅಸೂಯೆ ಮಧ್ಯೆ ಜಗತ್ ನಾಶಂ** ಎಂದು ಹೇಳಿದರೆ ಆಶ್ಚರ್ಯವೇನಿಲ್ಲ. ಅಂದರೆ ಎಲ್ಲಿ ಅಸೂಯೆ ಇರುತ್ತದೆಯೋ ಅಂತಹ ಮನೆ, ಮನ, ಭಾವ ಎಲ್ಲವೂ ನಾಶವಾಗುವುದು ನಿಶ್ಚಿತ. ಆದ್ದರಿಂದ ದ್ವೇಷ, ಅಸೂಯೆ ಬಿಟ್ಟು ಸ್ವಚ್ಛಂದವಾಗಿ ಬದುಕುವುದನ್ನು ನಾವು ಕಲಿಯಬೇಕಾಗಿದೆ.

ಒಟ್ಟಿನಲ್ಲಿ ಈ ಮನಸ್ಸು ಬದುಕಿನ ಅನುಭವಗಳ ಸಾಧನವದು. ಅದರಿಂದ ಕಣ್ಣಿನಲ್ಲಿ ಕಳೆ, ಮುಖದಲ್ಲಿ ಪ್ರಸನ್ನತೆ, ಬದುಕಿನಲ್ಲಿ ಒಲವು, ಬುದ್ಧಿಯಲ್ಲಿ ಬಲವು ಇದ್ದು. ಕಣ್ಣಿಗೆ ಕಣ್ಣಾಗಿ, ಕಿವಿಗೆ ಕಿವಿಯಾಗಿ, ಸಕಲೇಂದ್ರಿಯಗಳ ಕೇಂದ್ರ ಬಿಂದುವಾಗಿ ನಮ್ಮ ಬದುಕಿನ ಅನಿವಾರ್ಯ ಅವಿಭಾಜ್ಯ ಅಂಗವಾಗಿದೆ. ಸುಖ-ದು:ಖ, ನೋವು-ನಲಿವು, ಎಲ್ಲವನ್ನು ಅನುಭವಿಸಿ ಆನಂದಿಸುವುದೀ ಮನ. ಈ ಮನವಿಲ್ಲದಿದ್ದರೆ ನಮಗೆ ಪ್ರಪಂಚವಿಲ್ಲ; ಪಾರಮಾರ್ಥವೂ ಇಲ್ಲ. ಲೌಕಿಕ ಸಹಾಸಕ್ಕೂ ಸಂತಸದ ಸೌಧವನ್ನು ಕಟ್ಟುತ್ತದೆ ಈ ಮನ. ಮಹಂತರ ಉಪದೇಶದ ಮಾತಿನಲ್ಲಿ ಮಹದ ಬೆಳಕನ್ನು ಕಾಣುತ್ತದೆ. ಅಂದು ಕಂಡದ್ದನ್ನು ಇಂದಿಗೆ, ಇಂದು ಕಂಡದ್ದನ್ನು ಮುಂದೆಂದಿಗೂ ಮರೆಯದೆ, ತನ್ನ ಮಡಿಲಲ್ಲಿಟ್ಟು ಕಾಪಾಡುತ್ತದೆ. ಭೂತ ಭವಿಷ್ಯತ್ತನ್ನು ಬೆಸೆದು, ಕಾಲ ಚಕ್ರವನ್ನು ನಿರ್ಮಿಸಿ, ಬದುಕಿನ ಬಂಡಿಯನ್ನು ಎಡಬಿಡದೆ ಮುನ್ನಡೆಸುತ್ತದೆ. ಇಂತಹ ಮನಸ್ಸು, ಚಿತ್ತಾ ಅಥವಾ ಅಂತರಂಗವು ಪಾರದರ್ಶಕದಂತೆ ಮುಂಜಾವಿನ ಇಬ್ಬನಿಯಂತೆ ನಿರ್ಮಲವಾಗಿರಬೇಕು. ತಿಳಿ ತಿಳಿಯಾಗಿರಬೇಕು ಅದುವೇ ಮನಸ್ಸಿನ ಮಹತ್ವ.



ನಾ ಕಂಡಂತೆ
ಶ್ರೀ ಲಿಂಗಾನಂದ ಸ್ವಾಮೀಜಿ

ಚ. ವೇದಮೂರ್ತಿ

ಬಡತನದ ಬೇಗೆಯಲ್ಲಿ ಬೆಂದು ಬಸವಳಿದ ನನ್ನ ಮಾತಾಪಿತೃಗಳಾದ ಶರಣೆ ಅನುಸೂಯಮ್ಮ ಹಾಗೂ ಸ್ವಾತಂತ್ರ್ಯ ಯೋಧ ಶರಣ ಟಿ. ಚನ್ನಬಸಪ್ಪ ದಂಪತಿಗಳು ಹಿರಿಯೂರಿನಲ್ಲಿ ನೆಲೆಯೂರಿದ್ದ ತಮ್ಮ ಜೀವನದ ಧಾರುಣ ಸ್ಥಿತಿಯಲ್ಲೇ ಭಕ್ತಿಯಿಂದ ಪರಮಪೂಜ್ಯ ಶ್ರೀಗಳನ್ನು ಪಾದಪೂಜೆಗೆ ಮನೆಗೆ ಆಮಂತ್ರಿಸಿದರು. ಪರಮಪೂಜ್ಯ ಶ್ರೀಗಳ ಪಾದಾರ್ಪಣ/ಪ್ರಸಾದ ಮಾತ್ರದಿಂದ ಪುನೀತರಾದ ನಾವೆಲ್ಲರೂ ಶ್ರೀಗಳ ಅನುಯಾಯಿಗಳಾಗಿ ಪ್ರತಿನಿತ್ಯ ಪ್ರವಚನ ಆಲಿಸಿ ಪುನೀತರಾಗುತ್ತಿದ್ದೆವು. ನನ್ನ ಬಾಲ್ಯದ 8ನೆಯ ವಯಸ್ಸಿನಲ್ಲಿ 1964ರಲ್ಲಿ ಪರಮಪೂಜ್ಯ ಶ್ರೀಗಳಿಂದ ಹಿರಿಯೂರಿನಲ್ಲಿ ಶ್ರೀ ತೇರುಮಲ್ಲೇಶ್ವರ ದೇವಸ್ಥಾನದ ವಿಶಾಲ ಪ್ರಾಂಗಣದಲ್ಲಿ ಪ್ರವಚನ ಕಾರ್ಯಕ್ರಮ ಜಾರಿಯಲ್ಲಿತ್ತು. ಪ್ರತಿನಿತ್ಯ ಶ್ರೀಗಳ ಪ್ರವಚನಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದೆವು.

ಶ್ರೀಗಳ ಪ್ರವಚನದ ಉತ್ಕೃಷ್ಟತೆ ಬಹು ಉನ್ನತ ಮಟ್ಟದ್ದಾಗಿತ್ತು. ವಿಶಿಷ್ಟತೆಯೆಂದರೆ ಪ್ರತಿಪಾದನೆಯ ನೈಜತೆ, ನಿಖರತೆ, ಬಳಸುತ್ತಿದ್ದ ಪದಪುಂಜಗಳ ಪ್ರಖರತೆ, ಸಿದ್ಧಾಂತವನ್ನು ತೌಲನಿಕವಾಗಿ ಒರೆಗೆಚ್ಚುವ ನಿಪುಣತೆ ಇವೆಲ್ಲವುಗಳು ಸಹಜವಾಗಿ ಎಲ್ಲ ಶ್ರೋತೃಗಳನ್ನು ಚಿಂತನೆಗೊಳಪಡಿಸುತ್ತಿದ್ದವು. ಅಲ್ಲದೆ ಪ್ರವಚನದ ನಡುವೆ ಸುಂದರ ಉಪಕಥೆಗಳು, ದೃಷ್ಟಾಂತಗಳು, ತೆಳು ಹಾಸ್ಯದ ಲೇಪನಗಳು ಶ್ರೀಗಳ ವಿಚಾರಗಳನ್ನು ಮತ್ತಷ್ಟು ಪ್ರಭಾವಕಾರಿಯಾಗಿ ಎಲ್ಲರ ಮನ ತಲುಪುವಂತಾಗುತ್ತಿದ್ದವು. ತಮ್ಮ ವಿಶೇಷ ವಾಕ್ಚಾತುರ್ಯದಿಂದ ನೆರೆದಿದ್ದ ಭಕ್ತರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದ ನಿಪುಣತೆ ಅವರದು. ಇಂತಹ ವೈಚಾರಿಕತೆ ಹಾಗೂ ಅರ್ಥ ಪೂರ್ಣ ಪ್ರವಚನ ಗಳಿಂದ ಅತಿ ಪ್ರಭಾವಿತ ರಾಗಿ **"ಮನೆಗೊಬ್ಬ ವ್ಯಕ್ತಿಯನ್ನು ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿಸಿ"** ಎಂಬ ಶ್ರೀಗಳ ಧರ್ಮ ವಾಣಿಗೆ ಓಗೊಟ್ಟು ನನ್ನ ಮಾತಾ ಪಿತೃಗಳು 1964ರಲ್ಲಿ ಬಾಲಕನಾಗಿದ್ದ ನನ್ನನ್ನು 4ನೆಯ ತರಗತಿ ವ್ಯಾಸಂಗಕ್ಕಾಗಿ ಶ್ರೀಗಳ ಮಠಕ್ಕೆ ದಾವಣಗೆರೆಗೆ ಕಳುಹಿಸಿದರು.



ಪರಮಪೂಜ್ಯ ಶ್ರೀ ಶ್ರೀ ಲಿಂಗಾನಂದ

ಸ್ವಾಮಿಗಳ ಪ್ರವಚನದ ನಿಖರತೆ, ಬದ್ಧತೆ, ಪರಿಪೂರ್ಣತೆ ಎಷ್ಟು ತೀಕ್ಷ್ಣವಾಗಿತ್ತೆಂದರೆ "ಸರಿಯಾದಲ್ಲಿ ಆ. . .ದ ಎನ್ನಿರಿ, ಇಲ್ಲವಾದರೆ ಇಲ್ಲ ಎನ್ನಿರಿ" ಎಂದು ಭಕ್ತರಿಗೆ ಸವಾಲು ಹಾಕುತ್ತಿದ್ದ ಭಂಗಿ ಈಗಲೂ ಕಣ್ಮುಂದೆ ಸುಳಿದಂತಿದೆ. ನುರಿತ ವಾಕ್ಪಟು, ವರ್ಚಸ್ಸು ತುಂಬಿದ ಜಂಗಮ ಸ್ವರೂಪಿ ಶ್ರೀ ಶ್ರೀ ಶ್ರೀ ಲಿಂಗಾನಂದ ಮಹಾಸ್ವಾಮಿಗಳು 20ನೆಯ ಶತಮಾನ ಕಂಡ ಅನರ್ಘ್ಯ ರತ್ನ ಎಂದರೆ ಅತಿಶಯೋಕ್ತಿಯಲ್ಲ.

1965ರಲ್ಲಿ ಅಂದಿನ ದಾವಣಗೆರೆ ಪಟ್ಟಣದ ಈಶಾನ್ಯ ಭಾಗದಲ್ಲಿ ನಿಸರ್ಗದಡಿಯಲ್ಲಿ ಶ್ರೀ ಲಿಂಗಾನಂದ ಸ್ವಾಮಿಗಳ ಮಠ ಅಸ್ತಿತ್ವದಲ್ಲಿತ್ತು. ದಾವಣಗೆರೆಯ ಹೊರ ವಲಯದ ಪ್ರಶಾಂತ ವಾತಾವರಣದಲ್ಲಿ ಚರ್ಚ್ ರಸ್ತೆ, ವಿನೋಬಾನಗರ ಬಡಾವಣೆ, ಶಾಮನೂರು ಗ್ರಾಮ ಮತ್ತು ದೊಡ್ಡಬಾತಿ ಕೆರೆ ಈ ಮಧ್ಯೆ ನೆಲೆಗೊಂಡಿದ್ದ ಶ್ರೀಮಠದ ವಿದ್ಯಾರ್ಥಿ ಪ್ರಸಾದನಿಲಯದಲ್ಲಿ ವಸತಿ/ಪ್ರಸಾದ ಅವಕಾಶ ಕಲ್ಪಿಸಿಕೊಟ್ಟ ಮಹಾನ್ ಔದಾರ್ಯ ಮೂರ್ತಿ, ವಿದ್ಯಾ ದಾನಿಗಳು, ಶ್ರೇಷ್ಠ ಗುರುವರ್ಯರು ಶ್ರೀ ಶ್ರೀ ಶ್ರೀ ಲಿಂಗಾನಂದ ಅಪ್ಪಾಜಿಯವರು. ನನ್ನ ವಿದ್ಯಾಭ್ಯಾಸ ಅವಧಿಯಲ್ಲಿ 4ನೆಯ ತರಗತಿ ವ್ಯಾಸಂಗವನ್ನು ಶ್ರೀಮಠದಲ್ಲಿದ್ದುಕೊಂಡು ದಾವಣಗೆರೆ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಮುಗಿಸಿ ನಂತರ 5ನೆಯ ತರಗತಿ ಮಧ್ಯಾವಧಿಯಲ್ಲಿ (ಮಾತಾಪಿತೃಗಳ ಹಂಬಲ/ಒತ್ತಾಯದ ಮೇರೆಗೆ) ಹಿರಿಯೂರಿಗೆ ಹಿಂತಿರುಗಲಾಯಿತು. ಆ ಒಂದೂವರೆ ವರ್ಷಗಳ ಕಾಲ ನಮ್ಮ ಬಡತನಕ್ಕೆ ಸ್ಪಂದಿಸಿದ ಶ್ರೀಗಳು ಉಚಿತ ಪ್ರಸಾದ/ವಸತಿ ಕಲ್ಪಿಸಿದ ಔದಾರ್ಯಮೂರ್ತಿ, ವಿದ್ಯಾ ದಾನಿಗಳು ಆಗಿದ್ದರು. ಅಂದು ಶ್ರೀಗಳು ಕಲಿಸಿದ ಶಿಸ್ತು, ಸಂಯಮ, ದಯೆ, ಕಾಯಕ ತತ್ಪರತೆ, ಏಕಾಗ್ರತೆಗಳೆಲ್ಲವೂ ಇಂದಿನ ನಮ್ಮ ಸುಂದರ ಬದುಕಿಗೆ ಸ್ಫೂರ್ತಿಯ ಸೆಲೆಯಾಗಿವೆ ಎಂದು ಹೆಮ್ಮೆಯಿಂದ ಎದೆ ತಟ್ಟಿ ಹೇಳಬಲ್ಲೆ. ನನ್ನ ಬಾಳಲ್ಲಿ ಪರಮಪೂಜ್ಯ ಶ್ರೀ ಶ್ರೀ ಲಿಂಗಾನಂದ ಅಪ್ಪಾಜಿಯವರು ಸದಾ ಪ್ರಾತಃಸ್ಮರಣೀಯರು ಹಾಗೂ ಒಂದು ಅನಂತ ಬಸವ ಚೇತನ ಸ್ವರೂಪ.

ಪೂರ್ವಾಶ್ರಮದಲ್ಲಿ ಕಲ್ಲಮ್ಮ-ಮಲ್ಲಪ್ಪ ದಂಪತಿಗಳ ಪುಣ್ಯಗರ್ಭದಲ್ಲಿ 1931ರ ಗಣೇಶ ಚೌತಿಯಂದು ಶಿಶು ಸಂಗಮೇಶನಾಗಿ ಜನಿಸಿದ ಶ್ರೀಗಳು (ಶ್ರೀಗಳ ಬಾಲ್ಯದ ಹೆಸರು), ಬಸವಣ್ಣನವರು ಜನಿಸಿದ ಬಾಗೇವಾಡಿ ತಾಲ್ಲೂಕಿನಲ್ಲಿ ಉದಯಿಸಿದ ವಿಶ್ವಗುರು ಬಸವಣ್ಣನವರ ಮತ್ತೊಂದು ಪ್ರತಿರೂಪವಾಗಿದ್ದರು ಎಂದರೆ ಉತ್ಪ್ರೇಕ್ಷೆಯಲ್ಲ.

ಬಸವ ಧರ್ಮ ಪೀಠದ ಸಂಸ್ಥಾಪಕರು, ಪ್ರವಚನ ಪಿತಾಮಹರಾದ ಶ್ರೀಗಳ 21ನೇ ಪುಣ್ಯಸ್ಮರಣೆ ಸಂದರ್ಭದಲ್ಲಿ ಅದ್ವಿತೀಯ ಬಸವ ಚೈತನ್ಯಕ್ಕೆ ನಮ್ಮ ಭಕ್ತಿಪೂರ್ವಕ ಶಿರಸಾಷ್ಟಾಂಗ ನಮನಗಳು.

***** ಓದುಗರಿಗೆ ವಿಶೇಷ ಸೂಚನೆ *****

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದಲ್ಲಿ ವಿಶೇಷ ಲೇಖನಗಳನ್ನು basavakumaraswamiji@gmail.com ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು. ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸಿದರೆ ನಿಮ್ಮ ಫೋಟೊವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಶ್ರೀ ಬಸವಕುಮಾರ ಸ್ವಾಮೀಜಿ
ಮೊ.9449588669.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಬಸವ ಗಂಗೋತ್ರಿಯಲ್ಲಿ
ದೇವ(ಭಾನು)ವಾರ 26 ಜೂನ್ 2016ರಂದು
7ನೇ ಬಸವೋತ್ಸವ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು 1978ರಲ್ಲಿ ಬೆಂಗಳೂರಿನ ಕುಂಬಳಗೋಡು ಗ್ರಾಮ ವ್ಯಾಪ್ತಿಯ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು ಬಸವ ಗಂಗೋತ್ರಿ ಆಶ್ರಮ ಎಂಬ ಹೆಸರು ಹೊಂದಿ, ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತಿದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮ ಸಂಸ್ಥೆಯು ನಡೆಸುತ್ತಲಿದೆ. ಇಲ್ಲಿ ಬಸವಾಲಯ ನಿರ್ಮಿಸಿದ್ದು ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿ ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿ. ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳಾಗಿದ್ದಾರೆ. ಇಲ್ಲಿ ನಿತ್ಯವೂ ಪೂಜೆ ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

2010ರಿಂದ ವಾರ್ಷಿಕ ಉತ್ಸವವನ್ನಾಗಿ "ಬಸವೋತ್ಸವ" ವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ 26-6-2016ರಂದು " 7ನೇ ಬಸವೋತ್ಸವ" ಏರ್ಪಡಿಸಲಾಗಿದ್ದು ಬೆಳಗ್ಗೆ 10-30ಕ್ಕೆ ಉದ್ಘಾಟನೆ.

2010 ರಂದು ಜಗದ್ಗುರು ಶ್ರೀ ಚೆನ್ನಬಸವೇಶ್ವರ ಜ್ಞಾನ ಪೀಠವು ಸ್ಥಾಪನೆಗೊಂಡಿದ್ದು ಪೂಜಾ ನಿಷ್ಠರು, ಬಹುಬಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ನಂತರ ಸಮಾರೋಪ.

ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ. ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದ ವ್ಯವಸ್ಥೆ ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

ಮಹಾಪೋಷಕರು	10000 ರೂ	ಹಿತೈಷಿಗಳು	1000ರೂ
ಪೋಷಕರು	5000 ರೂ	ವಿಶೇಷ ಸದಸ್ಯರು	500ರೂ
ದಾನಿಗಳು	3000 ರೂ	ಸಾಮಾನ್ಯ ಸದಸ್ಯರು	250ರೂ

ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು, ಸ್ವತಃ ಉದಾರವಾಗಿ ದೇಣಿಗೆ ನೀಡುವುದಲ್ಲದೆ ರಸೀತಿ ಪುಸ್ತಕ ಪಡೆದುಕೊಂಡು ದೇಣಿಗೆ ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ-ಧಾನ್ಯ, ಅಕ್ಕಿ-ಬೇಳೆ, ಬೆಲ್ಲ-ಸಕ್ಕರೆ, ತರಕಾರಿ ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223, 224, 226 ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜೆಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆ ಮೇರೆಗೆ ನಿಲ್ಲುತ್ತವೆ. ಗಂಗೋತ್ರಿ ಪ್ರವೇಶದ್ವಾರ ರಾಮೋಹಳ್ಳಿ ಕ್ರಾಸ್-ಕುಂಬಳಗೋಡು ಮಧ್ಯದಲ್ಲಿದೆ.

ಸಂಪರ್ಕಿಸುವ ವಿಳಾಸಗಳು :

ಪೂಜ್ಯಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ
ಬೆಂಗಳೂರು ದಕ್ಷಿಣ ತಾಲ್ಲೂಕು
9448386717

ಪೂಜ್ಯಶ್ರೀ ಜಗದ್ಗುರು ಡಾ. ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್ ರಾಜಾಜಿನಗರ
ಬೆಂಗಳೂರು 560010
9663385657, 9449588669



ಪುಟಾಣಿಗಳ ಪ್ರಪಂಚ

ಬಕಪಕ್ಷಿ ಮತ್ತು ಏಡಿ

| ಪುನೀತ್ ಎಂ.ಜಿ.

ಒಂದು ಕೊಳ ಇತ್ತಂತೆ. ಅದರಲ್ಲಿದ್ದ ಮೀನುಗಳನ್ನ ತಿನ್ಕೊಂಡು ಒಂದು ಬಕಪಕ್ಷಿ ಜೀವನ ಮಾಡ್ತಾ ಇತ್ತಂತೆ..

ಹೀಗೆ ಸ್ವಲ್ಪ ವರ್ಷ ಆದ ಮೇಲೆ ಬಕಪಕ್ಷಿ ಅಜ್ಜ ಆಯ್ತುಂತೆ. ಅದಕ್ಕೆ ಮೀನು ಹಿಡ್ಕೊಂಡು ತಿನ್ನಕ್ಕೆ ಶಕ್ತಿನೇ ಇರ್ಲಿಲ್ವಂತೆ. ಉಪವಾಸ ಇದ್ದು ಇದ್ದು ಫುಲ್ ಸಣ್ಣ ಆಗೋಗಿತ್ತಂತೆ ಅದು.

ಎಷ್ಟ್ ದಿನ ಊಟ ಮಾಡದೆ ಇರಕ್ಕಾಗತ್ತೆ ಅಲ್ವಾ.. ಬಕ ಪಕ್ಷಿ ಒಂದು ಪ್ಲಾನ್ ಮಾಡ್ತಂತೆ. ಕೊಳದ ತುದಿಯಲ್ಲಿ ಒಂದೇ ಕಾಲಲ್ಲಿ ನಿಂತು-ಕೊಂಡು ಧ್ಯಾನ ಮಾಡ್ತಾ ಇರೋ ಹಾಗೆ ನಾಟ್ಕ ಮಾಡಕ್ಕೆ ಶುರು ಮಾಡ್ತಂತೆ.

ಮೀನುಗಳಿಗೆಲ್ಲ ಆಶ್ಚರ್ಯ, ಎಷ್ಟ್ ಹೊತ್ತಾಯ್ತು, ಬಕಪಕ್ಷಿ ಪಕ್ಕನೇ ಹೋದ್ರುನು ಯಾವ್ ಮೀನನ್ನು ತಿಂತಾನೆ ಇಲ್ಲ!

ಒಂದು ಮೀನು ಧೈರ್ಯ ಮಾಡಿ ಬಕ ಪಕ್ಷಿನಾ ಕೇಳೇ ಬಿಡ್ತು, ಏನಾಯ್ತು ಬಕಪಕ್ಷಿ ನಿಂಗೆ? ಮೀನು ತಿನ್ನೋದು ಬಿಟ್ಟುಬಿಟ್ಯಾ? ಅಂತ. ಬಕಪಕ್ಷಿ ನಿಧಾನಕ್ಕೆ ಕಣ್ಣು ತೆಗೆದು ಮೀನಿಗೆ ಹೇಳ್ತು.. ನೆನ್ನೆ ನಮ್ಮ ಕೊಳದ ಪತ್ತಿರ ಒಬ್ಬ ಜ್ಯೋತಿಷಿ ಬಂದಿದ್ದ, ಅವ್ನು ಹೇಳ್ತ ಇದ್ದ, ಕೊಳ ಈ ಸಲ ಬೇಸಿಗೇನಲ್ಲಿ ಬತ್ತಿ ಹೋಗತ್ತಂತೆ..

ನಾನು ಇದೆ ಕೊಳದಲ್ಲಿ ಹುಟ್ಟಿ ಬೆಳೆದವ, ನೀರು ಬತ್ತಿದ್ರೆ ನೀವೆಲ್ಲ ಸತ್ತು ಹೋಗ್ತೀರಾ, ನಿಮ್ಗೆಲ್ಲ ಮುಕ್ತಿ ಸಿಕ್ಲಿ ಅಂತ ನಾನು ದೇವರ ಧ್ಯಾನ ಮಾಡ್ತ ಇದೀನಿ ಅಂತು. ಮೀನುಗಳಿಗೆ ಬಕ ಪಕ್ಷಿ ಮಾತು ಕೇಳಿ ತುಂಬಾ ಭಯ ಆಯ್ತಂತೆ.. ಅವು ಬಕಪಕ್ಷಿಗೆ ಕೇಳಿದ್ವಂತೆ.. ಜ್ಯೋತಿಷಿ ನಾವೆಲ್ಲ ಬಚಾವಾಗಕ್ಕೆ ಏನಾದ್ರೂ ಉಪಾಯ ಹೇಳಿದ್ನಾ?

ಬಕಪಕ್ಷಿಗೆ ಫುಲ್ ಖುಷಿ ಆಗೋಯ್ತಂತೆ.. ನನ್ನ ಪ್ಲಾನ್ ಕೆಲ್ಸ ಮಾಡ್ತು.. ಪೆದ್ದು ಮೀನುಗಳೇ, ಇವತ್ತಿಂದ ನನಗೆ ಹಬ್ಬ ಅನ್ಕೊಂಡು ಹೇಳ್ತಂತೆ.. ಹೌದು, ಇಲ್ಲೆ ಸ್ವಲ್ಪ ದೂರಲ್ಲಿ ಇನ್ನೊಂದು ದೊಡ್ಡ ಕೊಳ ಇದ್ಯಂತೆ, ಅಲ್ಲಿ ತುಂಬಾ ನೀರಿದ್ಯಂತೆ, ಬೇಕಾದ್ರೆ ನಿಮ್ಮನ್ನೆಲ್ಲ ಅಲ್ಲಿಗೆ ಕರ್ಕೊಂಡು ಹೋಗಿ ಬಿಡ್ತೀನಿ ನಾನು ಅಂತ. ಸರಿ, ಮೀನುಗಳು ಒಪ್ಕೊಂಡ್ವಂತೆ ಬೇರೆ ಕೊಳಕ್ಕೆ ಹೋಗಕ್ಕೆ.

ಬಕಪಕ್ಷಿ ದಿನ ಒಂದೊಂದೇ ಮೀನ ಬೆನ್ನು ಮೇಲೆ ಕೂರ್ಸ್ಕೊಂಡು ಹೋಗಿ ತಿಂದು ಹಾಕ್ತಾ ಇತ್ತಂತೆ. ನೆಕ್ಸ್ಟ್ ಬಕಪಕ್ಷಿ ಒಂದು ಏಡಿ ಕೊಳಕ್ಕೆ ಬಿಡ್ತೀನಿ ಅಂತ ಕರ್ಕೊಂಡು ಹೋಯ್ತಂತೆ. ಹಾರ್ತಾ ಇರುವಾಗ, ಏಡಿ ಕೆಳಗೆ ನೋಡುತ್ತೆ. ಅಲ್ಲಿ ಮೀನುಗಳದ್ದು ಮೂಳೆಗಳೆಲ್ಲ ಬಿದ್ದಿತ್ತಂತೆ. ಏಡಿ ಜಾಣ, ಅದಕ್ಕೆ ಬಕಪಕ್ಷಿ ಮಾಡಿದ ಮೋಸ ಗೊತ್ತಾಗೋಯ್ತು..

ಮಾಡ್ತೀನಿ ಈ ಬಕಪಕ್ಷಿಗೆ ಅಂತ ಕೇಳ್ತಂತೆ ಬಕಪಕ್ಷಿ, ನಿನಗೆ ಹಾರಿ ಹಾರಿ ಸುಸ್ತಾಗಿರ್ಬೇಕಲ್ವಾ, ಸ್ವಲ್ಪ ಹೊತ್ತು ರೆಸ್ಟ್ ತಗೊಂಡು ಹೋಗೋಣ?

ಬಕಪಕ್ಷಿ ನೆಲದ ಮೇಲೆ ಇಳಿಬೇಕು ಅನ್ನುವಾಗ, ಏಡಿ ಅದರ ಕತ್ತನ್ನ ಕಚ್ಚಿ ಬಿಡ್ತಂತೆ.. ಬಕಪಕ್ಷಿ ಗೊಟಕ್ ಅಂತು.. ಜಾಣ ಏಡಿ ತಪ್ಪಿಸ್ಕೊಳ್ತು.

ಮೊಣಕಾಲು ನೋವು

| ಪುನೀತ್ ಎಂ.ಜಿ.

ಮೂಲಲೇಖನ : ಡಾ.ಶಂಕರ್ ಪಾರಂಪರ್ಯ

ಮೊಣಕಾಲು ನೋವು ಸಾಮಾನ್ಯವಾಗಿ ಮಧ್ಯ ವಯಸ್ಸಿನಲ್ಲಿ ಕಂಡು ಬರುತ್ತದೆ. ಇದು ಹಲವಾರು ರೀತಿಯಲ್ಲಿ ಕಂಡುಬರಬಹುದು, ಒತ್ತಡ ಅಥವಾ ಗಾಯದಿಂದಾಗಿ ಬರುವ ತಾತ್ಕಾಲಿಕ ಮೂಳೆ ನೋವು ಹಾಗೂ ಮೂಳೆ ಸವೆತದಿಂದ ಬರುವ ಬೇನೆಗಳಿವೆ. ಕೆಲವೊಂದು ಸಂದರ್ಭಗಳಲ್ಲಿ ಮೂಳೆಗಳ ನಡುವೆ ನೋವು ತೀವ್ರವಾಗಿ ನಿಮ್ಮನ್ನು ಕಾಡಬಹುದು. ಮೊಣಕಾಲು ನೋವು ಕೀಲು ನೋವಿನ ಒಂದು ವಿಧವಾಗಿದೆ. ಪ್ರತಿಯೊಬ್ಬರಲ್ಲೂ ಮೊಣಕಾಲು ನೋವು ಸರ್ವೇಸಾಮಾನ್ಯ. ಸಂಧಿವಾತದಿಂದಲೂ ಮೊಣಕಾಲು ನೋವು ಕಂಡುಬರುತ್ತದೆ.

ಮೂಳೆಗಳಲ್ಲಿ ಕಡಿಮೆ ಪ್ರಮಾಣದ ಕ್ಯಾಲ್ಷಿಯಂ ಅಂಶಗಳಿದ್ದರೆ ಮತ್ತು ಮೂಳೆಗಳ ಮೇಲೆ ಒತ್ತಡ ಬೀಳುವುದರಿಂದ ನೋವು ಸಂಭವಿಸಬಹುದು. ಮೂಳೆನೋವಿನ ವ್ಯತಿರಿಕ್ತ ಲಕ್ಷಣಗಳೆಂದರೆ ಊತ, ನೋವು ಮತ್ತು ಹಟಮಾರಿ ಧೋರಣೆಯಾಗಿದೆ. ಮೂಳೆ ನೋವು ಕೆಲವೊಂದು ಸಂದರ್ಭಗಳಲ್ಲಿ ತುಂಬಾ ತೀವ್ರವಾಗಿರುತ್ತದೆ. ದೀರ್ಘ ಸಮಯದವರೆಗೆ ಕಾಡುತ್ತಿದ್ದರೆ. ಒತ್ತಡ ಅಥವಾ ಗಾಯದಿಂದಾಗಿ ಬರುವ ತಾತ್ಕಾಲಿಕ ಮೂಳೆ ನೋವಿಗೆ ವಿವಿಧ ಬೇನೆಗಳಿವೆ.




ಇಂತಹ ನೋವುಗಳಿಗಾಗಿ ನೋವು ನಿವಾರಕಗಳು ಅಥವಾ ಜೆಲ್‌ಗಳನ್ನು ಬಳಸಲಾಗುತ್ತದೆ. ಮೂಳೆ ನೋವಿಗಾಗಿ ಮನೆಯಲ್ಲೇ ಮಾಡಬಹುದಾದ ಸರಳ ಮದ್ದುಗಳು ಹಲವಾರಿವೆ. ಕೆಲವು ವ್ಯಾಯಾಮಗಳು, ಮಸಾಜ್‌ಗಳು ಮತ್ತು ಮನೆಯಲ್ಲೇ ತಯಾರಿಸಿದ ನೈಸರ್ಗಿಕ ಮದ್ದುಗಳ ಹಚ್ಚುವಿಕೆಗಳನ್ನು ಇದು ಒಳಗೊಂಡಿರುತ್ತದೆ. ಇಂತಹ ಮದ್ದುಗಳು ನೋವಿನಿಂದ ಉಪಶಮನವನ್ನು ನೀಡುತ್ತವೆ. ಮೂಳೆ ನೋವಿನ ಜಡಕ್ಕೆ ಹೋಗಿ ಬುಡದಿಂದಲೇ ಅದನ್ನು ನಿವಾರಿಸುತ್ತದೆ. ಮೂಳೆ ನೋವಿನಿಂದ ಉಪಶಮನ ನೀಡುವ ಕೆಲವೊಂದು ಮುಖ್ಯವಾದ ಸರಳ ಮನೆಮದ್ದುಗಳು ಇಲ್ಲಿವೆ.

1. ಯೋಗ

ಹಲವಾರು ಆರೋಗ್ಯ ಸಮಸ್ಯೆಗಳಿಗೆ ಯೋಗ ಉತ್ತಮ ಪರಿಹಾರ. ಪ್ರತಿಯೊಂದು ಬಗೆಯ ನೋವನ್ನು ನಿವಾರಿಸಿ ಹೃದಯ ಮತ್ತು ಮಿದುಳನ್ನು ಸುಸ್ಥಿತಿಯಲ್ಲಿಡುತ್ತದೆ. ಸಾಮಾನ್ಯವಾಗಿ ಯೋಗ ಕೂಡ ಮೂಳೆ ನೋವಿಗೆ ಉತ್ತಮವಾದುದು. ಮೂಳೆಯ ಮಾಂಸಖಂಡಗಳನ್ನು ಬಲಗೊಳಿಸುವ ಕೆಲವೊಂದು ಯೋಗ ಶೈಲಿಗಳಿದ್ದು, ಇವುಗಳು ಮೂಳೆಯ ಮಾಂಸಖಂಡಗಳ ಸದೃಢತೆಯನ್ನು ಹೆಚ್ಚಿಸುತ್ತದೆ. ನೋವುಗಳ ಉಪಶಮನಕ್ಕಾಗಿ ಕೂಡ ಯೋಗ ಅತ್ಯುತ್ತಮವಾದುದು.

2. ಕ್ಯಾಲ್ಷಿಯಂ ಅಂಶ





ಕೀಲು ನೋವ ಸಾಮಾನ್ಯವಾಗಿ ಕ್ಯಾಲ್ಸಿಯಂ ಕೊರತೆಯಿಂದ ಉಂಟಾಗುತ್ತದೆ. ಮೂಳೆಗಳಲ್ಲಿ ಕ್ಯಾಲ್ಸಿಯಂ ಕೊರತೆ ಉಂಟಾದಾಗ ಅವುಗಳ ಬಲ ಕುಗ್ಗುತ್ತದೆ. ಕ್ಯಾಲ್ಸಿಯಂ ಮತ್ತು ಇತರ ಪೋಷಕಾಂಶ ಹೆಚ್ಚಿರುವ ಆಹಾರವನ್ನು ತೆಗೆದುಕೊಳ್ಳಿ. ಮೂಳೆ ನೋವು ಅಥವಾ ಇತರ ಯಾವುದೇ ಕೀಲು ನೋವಿನ ಸಮಸ್ಯೆಗಳಿಗೆ ಇದೊಂದು ಉತ್ತಮ ಪರಿಹಾರವಾಗಿದೆ.

3.ವ್ಯಾಯಾಮ

ವ್ಯಾಯಾಮ ಹಲವಾರು ರೋಗಗಳಿಗೆ ಸೂಕ್ತ ಪರಿಹಾರವನ್ನು ನೀಡುತ್ತದೆ. ಅತಿತೂಕ ಮತ್ತು ಸ್ಥೂಲಕಾಯತೆಯಿಂದ ಕೆಲವೊಮ್ಮೆ ಮೂಳೆ ನೋವು ಉಂಟಾಗಬಹುದು. ಮೂಳೆ, ಸ್ನಾಯುಗಳಿಗೆ ವ್ಯಾಯಾಮ ಸಿಗುವಂತಹ ದೈಹಿಕ ಕಸರತ್ತನ್ನು ಮಾಡಬೇಕು. ಸ್ಕಿಪ್ಪಿಂಗ್, ಏರೋಬಿಕ್ಸ್ ಮತ್ತು ಡ್ಯಾನ್ಸಿಂಗ್‌ನಂತಹ ವ್ಯಾಯಾಮಗಳನ್ನು ಮನೆಯಲ್ಲಿ ಮಾಡಿ. ಮೂಳೆಗಳಿಗೆ ಭರಿಸಲಾಗದ ಅತಿಯಾದ ತೂಕವನ್ನು ವ್ಯಾಯಾಮವು ಕಡಿಮೆ ಮಾಡುತ್ತದೆ ಹಾಗೂ ಪ್ರತಿದಿನ ಪ್ರತಿಯೊಬ್ಬರೂ ಕನಿಷ್ಠ 2 ಕಿಲೋಮೀಟರ್‌ನಷ್ಟು ದೂರ ನಡೆಯುವುದು ಒಳ್ಳೆಯದು.

4. ಇತರ ಪರಿಹಾರಗಳು

ಮೇಲೆ ತಿಳಿಸಿದ ಮನೆ ಮದ್ದುಗಳ ಬದಲಾಗಿ ಕೂಡ ಹಲವಾರು ಮೂಳೆ ನೋವಿನ ಪರಿಹಾರ ಉಪಾಯಗಳು ಸಾಕಷ್ಟಿವೆ. ಅರಿಶಿನ ಮಿಶ್ರಿತ ಹಾಲಿನ ಸೇವನೆಯನ್ನು, ಈ ಪರಿಹಾರಗಳು ಒಳಗೊಂಡಿವೆ. ಊತವನ್ನು ಕಡಿಮೆ ಮಾಡುವ ಅಂಶಗಳು ಅರಶಿನದಲ್ಲಿ ಹೇರಳವಾಗಿದ್ದು ಮೂಳೆನೋವಿಗೆ ಪರಿಹಾರವನ್ನು ನೀಡುತ್ತದೆ. ಸೆಳೆತವಿರುವ ಜಾಗಕ್ಕೆ ಮೆಂತ್ಯವನ್ನು ನೆನೆಸಿ ಅದನ್ನು ಪೇಸ್ಟ್‌ನಂತೆ ಸವರಿ. ಇದು ಕೂಡ ಉತ್ತಮ ಪರಿಹಾರಕವಾಗಿದೆ.

5. ಎಣ್ಣೆ ಮಸಾಜ್

ಬಿಸಿ ಎಣ್ಣೆ ಮಸಾಜ್ ಮೂಳೆ ನೋವಿಗೆ ರಾಮಬಾಣ. ನೋವಿರುವ ಜಾಗಕ್ಕೆ ನಿತ್ಯವೂ ಎಣ್ಣೆ ಮಸಾಜ್ ಮಾಡುವುದು ತುಂಬಾ ಉಪಯೋಗಕಾರಿ. ಸ್ವಲ್ಪ ಎಣ್ಣೆ ತೆಗೆದುಕೊಂಡು ಅದನ್ನು ಬಿಸಿ ಮಾಡಿ. ಬಿಸಿ ಮಾಡಿದ ಎಣ್ಣೆಯನ್ನು ನೋವಿರುವ ಜಾಗಕ್ಕೆ 10–15 ನಿಮಿಷಗಳಿಗೆ ಹಚ್ಚಿ ಹಾಗೂ ವೃತ್ತಾಕಾರವಾಗಿ ಮಸಾಜ್ ಮಾಡಿ. ಎಣ್ಣೆ ಮಸಾಜ್ ನೋವಿನಿಂದ ತ್ವರಿತ ಆರಾಮವನ್ನು ನೀಡುತ್ತದೆ. ಇದಕ್ಕೆ ಸೂಕ್ತ ಎಣ್ಣೆ ಎಂದರೆ ಕೇರಳದ ಕೊಚ್ಚಿಯಲ್ಲಿ ತಯಾರಿಸುವ ಪಾರಂಪರ್ಯ. ಈ ಎಣ್ಣೆ ಹಚ್ಚಿ ಮಸಾಜ್ ಮಾಡುವುದರಿಂದ ತೀವ್ರತರ ನೋವುಗಳು ನೀಧಾನವಾಗಿ ಗುಣಮುಖವಾಗುತ್ತದೆ. ಪಾರಂಪರ್ಯ ಹಾಗೂ ಪಾರಂಪರ್ಯದ ಇತ್ತೀಚಿನ ಹೊಸ ಸಂಶೋಧನೆಯಾದ ಗ್ರೀನ್ ಎಂಬ ಎಣ್ಣೆಯನ್ನು ನಿತ್ಯವೂ ಸುಮಾರು 30 ರಿಂದ 45 ದಿನ ಬಳಸಿದರೆ ತೀವ್ರತರ ನೋವುಗಳು ಶೇ.99 ಭಾಗ ಕಡಿಮೆಯಾಗುತ್ತವೆ. ಪಾರಂಪರ್ಯ ಎಣ್ಣೆ ಮಸಾಜ್‌ನೊಂದಿಗೆ ರಾತ್ರಿ ಮಲಗುವಾಗ ತಾಂಬೂಲ ಸೇವನೆ. ಎಳನೀರು ಸೇವನೆ ನೋವನ್ನು ಬೇಗ ಗುಣಮುಖವಾಗಿಸುತ್ತದೆ. ಹೆಚ್ಚಿನ ಮಾಹಿತಿಗೆ 8748972214, 9449588669 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಿರಿ.



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಿಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ-ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

✠ ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010. 9448137508, 9449588669



Registered with Registrar oF News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO. Mysuru Road (Bg-560026) on 3rd, 10th, 20th of every month. Pages 32+4